# **ಪುರಾತನ ವಸ್ತು ಮತ್ತು ಕಲಾ ನಿಧಿ ಅಧಿನಿಯಮ, 1972**

**15.03.1999ರ ಭಾರತ ವಿಶೇಷ ರಾಜಪತ್ರದ IXನೇ ಭಾಗದ 1ನೇ ವಿಭಾಗದ 17ನೇ ಸಂಪುಟದ 1ನೇ ಸಂಚಿಕೆಯಲ್ಲಿ 13 ರಿಂದ 22ರ ವರೆಗಿನ ಪುಟಗಳಲ್ಲಿ ಪ್ರಕಟವಾಗಿದೆ.**

## **ಪ್ರಕರಣಗಳ ಅನುಕ್ರಮಣಿಕೆ**

**ಪ್ರಕರಣಗಳು:**

1. ಚಿಕ್ಕ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ
2. ಪರಿಭಾಷೆಗಳು
3. ಪುರಾತನ ವಸ್ತುಗಳು ಮತ್ತು ಕಲಾನಿಧಿಗಳ ರಫ್ತು ವ್ಯಾಪಾರದ ನಿಯಂತ್ರಣ
4. 1962ರ ಅಧಿನಿಯಮ 52ರ ಅನ್ವಯ
5. ಪುರಾತನ ವಸ್ತುಗಳನ್ನು ಲೈಸೆನ್ಸಿನ ಮೇರೆಗೆ ಮಾತ್ರವೇ ಮಾರಾಟಮಾಡತಕ್ಕದ್ದು
6. ಲೈಸೆನ್ಸು ಕೊಡುವ ಅಧಿಕಾರಿಗಳ ನೇಮಕಾತಿ
7. ಲೈಸೆನ್ಸಿಗಾಗಿ ಅರ್ಜಿ
8. ಲೈಸೆನ್ಸಿನ ಮಂಜೂರಾತಿ
9. ಲೈಸೆನ್ಸಿನ ನವೀಕರಣ
10. ಲೈಸೆನ್ಸುದಾರರು, ದಾಖಲೆಗಳು, ಛಾಯಾಚಿತ್ರಗಳು ಮತ್ತು ರಿಜಿಸ್ಟರುಗಳನ್ನು ಇಟ್ಟುಕೊಂಡುಬರುವುದು
11. ಲೈಸೆನ್ಸುಗಳ ರದ್ದಿಯಾತಿ, ಅಮಾನತು ಮತ್ತು ತಿದ್ದುಪಡಿ
12. ಯಾರ ಲೈಸೆನ್ಸುಗಳನ್ನು ರದ್ದುಗೊಳಿಸಲಾಗಿದೆಯೋ ಆ ವ್ಯಕ್ತಿಗಳು ಪುರಾತನ ವಸ್ತುಗಳನ್ನು ಇತರ ಲೈಸೆನ್ಸುದಾರರಿಗೆ ಮಾರಾಟ ಮಾಡಬಹುದು
13. ಇತರರನ್ನು ಹೊರತುಪಡಿಸಿ, ಪುರಾತನ ವಸ್ತುಗಳನ್ನು ಮಾರಾಟ ಮಾಡುವ ವ್ಯವಹಾರವನ್ನು ನಡೆಸಲು ಕೇಂದ್ರ ಸರ್ಕಾರಕ್ಕೆ ಅಧಿಕಾರ
14. ಪುರಾತನ ವಸ್ತುಗಳ ನೋಂದಣಿ
15. ನೋಂದಣಿ ಅಧಿಕಾರಿಗಳ ನೇಮಕಾತಿ
16. ನೋಂದಣಿ ಮತ್ತು ನೋಂದಣಿಯ ಪ್ರಮಾಣಪತ್ರದ ಮಂಜೂರಾತಿಗಾಗಿ ಅರ್ಜಿ
17. ಪುರಾತನ ವಸ್ತುಗಳ ಒಡೆತನ ಇತ್ಯಾದಿಗಳ ವರ್ಗಾವಣೆಯನ್ನು ನೋಂದಣಿ ಅಧಿಕಾರಿಗೆ ತಿಳಿಸತಕ್ಕದ್ದು
18. 14, 16 ಮತ್ತು 17ನೇ ಪ್ರಕರಣಗಳ ಉಪಬಂಧಗಳು ಕೆಲವು ಸಂದರ್ಭಗಳಲ್ಲಿ ಅನ್ವಯವಾಗತಕ್ಕದ್ದಲ್ಲ
19. ಪುರಾತನ ವಸ್ತುಗಳು ಮತ್ತು ಕಲಾನಿಧಿಗಳನ್ನು ಕಡ್ಡಾಯವಾಗಿ ಆರ್ಜಿಸಲು ಕೇಂದ್ರ ಸರ್ಕಾರದ ಅಧಿಕಾರ
20. 19ನೇ ಪ್ರಕರಣದ ಮೇರೆಗೆ ಕಡ್ಡಾಯವಾಗಿ ಆರ್ಜಿಸಿದ ಪುರಾತನ ವಸ್ತು ಮತ್ತು ಕಲಾನಿಧಿಗಳಿಗಾಗಿ ನಷ್ಟ ಪರಿಹಾರದ ಸಂದಾಯ
21. ಲೈಸೆನ್ಸು ಕೊಡುವ ಅಧಿಕಾರಿಗಳ ಮತ್ತು ನೋಂದಣಿ ಅಧಿಕಾರಿಗಳ ತೀರ್ಮಾನಗಳ ವಿರುದ್ಧ ಅಪೀಲುಗಳು
22. ಮಧ್ಯಸ್ಥಗಾರರ ಐತೀರ್ಪುಗಳ ವಿರುದ್ಧ ಅಪೀಲುಗಳು
23. ಪ್ರವೇಶ, ಶೋಧನೆ, ಅಭಿಗ್ರಹಣೆ ಮುಂತಾದವುಗಳ ಬಗ್ಗೆ ಅಧಿಕಾರ
24. ಒಂದು ವಸ್ತು ಪುರಾತನ ವಸ್ತು ಅಥವಾ ಕಲಾನಿಧಿಯೇ ಅಥವಾ ಅಲ್ಲವೇ ಎಂಬುದನ್ನು ನಿರ್ಧರಿಸಲು ಅಧಿಕಾರ
25. ದಂಡ
26. ಅಪರಾಧಗಳ ಸಂಜ್ಞೇಯತೆ
27. ಹೆಚ್ಚಿಸಲಾದ ದಂಡಗಳನ್ನು ವಿಧಿಸಲು ಮ್ಯಾಜಿಸ್ಟ್ರೇಟನ ಅಧಿಕಾರ
28. ಕಂಪನಿಗಳಿಂದ ಅಪರಾಧಗಳು
29. ಸದ್ಭಾವನೆಯಿಂದ ತೆಗೆದುಕೊಂಡ ಕ್ರಮದ ಬಗ್ಗೆ ಸಂರಕ್ಷಣೆ
30. ಇತರ ಕಾನೂನುಗಳ ಅನ್ವಯವು ಪ್ರತಿಷೇಧಿತವಾಗಿಲ್ಲ
31. ನಿಯಮ ರಚನಾಧಿಕಾರ
32. ನಿರಸನ
33. 1958ರ ಅಧಿನಿಯಮ 24ರ ತಿದ್ದುಪಡಿ

# ಪುರಾತನ ವಸ್ತು ಮತ್ತು ಕಲಾ ನಿಧಿ ಅಧಿನಿಯಮ, 1972

(1972ರ ಅಧಿನಿಯಮ ಸಂಖ್ಯೆ 52)

[9ನೇ ಸೆಪ್ಟೆಂಬರ್ 1972]

ಪುರಾತನ ವಸ್ತುಗಳು ಮತ್ತು ಕಲಾನಿಧಿಗಳ ರಫ್ತು ವ್ಯಾಪಾರವನ್ನು ನಿಯಂತ್ರಿಸುವ, ಪುರಾತನ ವಸ್ತುಗಳ ಕಳ್ಳ ಸಾಗಾಣಿಕೆಯನ್ನು ಮತ್ತು ಅವುಗಳಲ್ಲಿ ಮೋಸದ ವ್ಯವಹಾರಗಳನ್ನು ತಡೆಗಟ್ಟುವುದಕ್ಕಾಗಿ ಉಪಬಂಧಿಸುವ, ಸಾರ್ವಜನಿಕ ಸ್ಥಳಗಳಲ್ಲಿ ಪರಿರಕ್ಷಿಸುವುದಕ್ಕಾಗಿ ಪುರಾತನ ವಸ್ತುಗಳು ಮತ್ತು ಕಲಾನಿಧಿಗಳ ಕಡ್ಡಾಯ ಆರ್ಜನೆಗಾಗಿ ಉಪಬಂಧಿಸುವ ಮತ್ತು ಅವುಗಳಿಗೆ ಸಂಬಂಧಿಸಿದ ಅಥವಾ ಅವುಗಳಿಗೆ ಪ್ರಾಸಂಗಿಕವಾದ ಅಥವಾ ಸಹಾಯಕವಾದ ಇತರ ಕೆಲವು ವಿಷಯಗಳಿಗಾಗಿ ಉಪಬಂಧಿಸುವ ಅಧಿನಿಯಮ.

ಭಾರತ ಗಣರಾಜ್ಯದ ಇಪ್ಪತ್ತೂರನೇ ವರ್ಷದಲ್ಲಿ ಸಂಸತ್ತಿನಿಂದ ಈ ಕೆಳಕಂಡಂತೆ ಅಧಿನಿಯಮಿತವಾಗತಕ್ಕದ್ದು:–

**1. ಚಿಕ್ಕ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ.**– ಈ ಅಧಿನಿಯಮವನ್ನು ಪುರಾತನ ವಸ್ತು ಮತ್ತು ಕಲಾನಿಧಿ ಅಧಿನಿಯಮ, 1972 ಎಂದು ಕರೆಯತಕ್ಕದ್ದು.

(2) ಇದು ಇಡೀ ಭಾರತಕ್ಕೆ ವ್ಯಾಪ್ತವಾಗುತ್ತದೆ.

(3) ಇದು, ಕೇಂದ್ರ ಸರ್ಕಾರವು ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಗೊತ್ತುಪಡಿಸಬಹುದಾದಂಥ ದಿನಾಂಕದಂದು ಜಾರಿಗೆ ಬರತಕ್ಕದ್ದು ಮತ್ತು ಈ ಅಧಿನಿಯಮದ ಬೇರೆ ಬೇರೆ ಉಪಬಂಧಗಳಿಗಾಗಿ ಮತ್ತು ಬೇರೆ ಬೇರೆ ರಾಜ್ಯಗಳಿಗಾಗಿ ಬೇರೆ ಬೇರೆ ದಿನಾಂಕಗಳನ್ನು ಗೊತ್ತುಪಡಿಸಬಹುದು ಮತ್ತು ಈ ಅಧಿನಿಯಮದ ಪ್ರಾರಂಭದ ಬಗ್ಗೆ ಯಾವುದೇ ಅಂಥ ಉಪಬಂಧದಲ್ಲಿನ ಯಾವುದೇ ಉಲ್ಲೇಖವನ್ನು, ಆ ಉಪಬಂಧವು ಜಾರಿಗೆ ಬರುವ ಬಗೆಗಿನ ಉಲ್ಲೇಖವೆಂದು ಅರ್ಥೈಸತಕ್ಕದ್ದು.

**2. ಪರಿಭಾಷೆಗಳು.**– ಈ ಅಧಿನಿಯಮದಲ್ಲಿ, ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,–

(ಎ) "ಪುರಾತನ ವಸ್ತು" ಎಂಬುದು ಒಂದು ನೂರು ವರ್ಷಗಳಿಗಿಂತ ಕಡಿಮೆಯಿಲ್ಲದಂತೆ ಅಸ್ತಿತ್ವದಲ್ಲಿರುವಂಥ,–

(I) (i) ಯಾವುದೇ ನಾಣ್ಯ, ಶಿಲ್ಪ, ಚಿತ್ರಕಲೆ, ಶಾಸನ ಅಥವಾ ಯಾವುದೇ ಇತರ ಕಲಾಕೃತಿ ಅಥವಾ ಕುಶಲಕರ್ಮ;

(ii) ಕಟ್ಟಡ ಅಥವಾ ಗುಹೆಯಿಂದ ಬೇರ್ಪಡಿಸಿದ ಯಾವುದೇ ವಸ್ತು, ಪದಾರ್ಥ ಅಥವಾ ಸಾಮಗ್ರಿ;

(iii) ಗತಕಾಲಗಳ ವಿಜ್ಞಾನ, ಕಲೆ, ಕುಶಲಕಲೆ, ಸಾಹಿತ್ಯ, ಧರ್ಮ, ರೂಢಿಗಳು, ನೀತಿ ಅಥವಾ ರಾಜಕೀಯ ಇವುಗಳ ದೃಷ್ಟಾಂತ ರೂಪದ ಯಾವುದೇ ವಸ್ತು, ಪದಾರ್ಥ ಅಥವಾ ಸಾಮಗ್ರಿ;

(iv) ಐಕತಿಹಾಸಿಕ ಮಹತ್ವದ ಯಾವುದೇ ವಸ್ತು, ಪದಾರ್ಥ ಅಥವಾ ಸಾಮಗ್ರಿ;

(v) ಕೇಂದ್ರ ಸರ್ಕಾರವು, ರಾಜಪತ್ರದಲ್ಲಿ, ಅಧಿಸೂಚನೆಯ ಮೂಲಕ ಈ ಅಧಿನಿಯಮದ ಉದ್ದೇಶಗಳಿಗಾಗಿ ಪುರಾತನ ವಸ್ತುವೆಂದು ಘೋಷಿಸಿದ ಯಾವುದೇ ವಸ್ತು, ಪದಾರ್ಥ ಅಥವಾ ಸಾಮಗ್ರಿ;

(II) ವೈಜ್ಞಾನಿಕ, ಐತಿಹಾಸಿಕ, ಸಾಹಿತ್ಯಿಕ ಅಥವಾ ಸೌಂದರ್ಯದ ಮೌಲ್ಯವುಳ್ಳಂಥ ಮತ್ತು ಎಪ್ಪತ್ತೈದು ವರ್ಷಗಳಿಗಿಂತ ಕಡಿಮೆಯಿಲ್ಲದ ಅವಧಿಯಿಂದ ಅಸ್ತಿತ್ವದಲ್ಲಿ ಇದ್ದಿರುವಂಥ ಯಾವುದೇ ಹಸ್ತಪ್ರತಿ, ದಾಖಲೆ ಅಥವಾ ಇತರ ದಸ್ತಾವೇಜು

– ಇವುಗಳನ್ನು ಒಳಗೊಳ್ಳುತ್ತದೆ.

(ಬಿ) "ಕಲಾನಿಧಿ" ಎಂದರೆ, ಕಲಾತ್ಮಕ ಅಥವಾ ಸೌಂದರ್ಯದ ಮೌಲ್ಯವನ್ನು ಗಮನಿಸಿ, ಈ ಅಧಿನಿಯಮದ ಉದ್ದೇಶಗಳಿಗಾಗಿ ಕಲಾನಿಧಿಯಾಗಿರುವುದೆಂದು ಕೇಂದ್ರ ಸರ್ಕಾರವು, ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಘೋಷಿಸಿದ ಪುರಾತನ ವಸ್ತು ಆಗಿರದ ಯಾವುದೇ ಮಾನವ ಕಲಾಕೃತಿ:

ಪರಂತು, ಈಖಂಡದ ಮೇರೆಗೆ ಯಾವುದೇ ಘೋಷಣೆಯನ್ನು ಅಂಥ ಕಲಾಕೃತಿಗೆ ಸಂಬಂಧಿಸಿದಂತೆ, ಅದರ ಕರ್ತೃವು ಜೀವಂತವಾಗಿರುವವರೆಗೆ ಮಾಡತಕ್ಕದ್ದಲ್ಲ.

(ಸಿ) "ರಫ್ತು" ಎಂದರೆ, ಭಾರತದ ಹೊರಗಿನ ಒಂದು ಸ್ಥಳಕ್ಕೆ, ಭಾರತದಿಂದ ಹೊರಗಡೆ ತೆಗೆದುಕೊಂಡು ಹೋಗುವುದು;

(ಡಿ) "ಲೈಸೆನ್ಸು ಕೊಡುವ ಅಧಿಕಾರಿ" ಎಂದರೆ, 6ನೇ ಪ್ರಕರಣದ ಮೇರೆಗೆ ಹಾಗೆಂದು ನೇಮಕಗೊಂಡ ಒಬ್ಬ ಅಧಿಕಾರಿ;

(ಇ) "ನೋಂದಣಿ ಅಧಿಕಾರಿ" ಎಂದರೆ 15ನೇ ಪ್ರಕರಣದ ಮೇರೆಗೆ ಹಾಗೆಂದು ನೇಮಕಗೊಂಡ ಒಬ್ಬ ಅಧಿಕಾರಿ;

(ಎಫ್) "ನಿಯಮಿಸಲಾದುದು" ಎಂದರೆ ಈ ಅಧಿನಿಯಮದ ಮೇರೆಗೆ ರಚಿಸಿದ ನಿಯಮಗಳ ಮೂಲಕ ನಿಯಮಿಸಲಾದುದು.

(2) ಯಾವುದೇ ಪ್ರದೇಶದಲ್ಲಿ ಜಾರಿಯಲ್ಲಿಲ್ಲದಂಥ ಯಾವುದೇ ಕಾನೂನಿನ ಬಗ್ಗೆ ಈ ಅಧಿನಿಯಮದಲ್ಲಿ ಮಾಡಿರುವ ಯಾವುದೇ ಉಲ್ಲೇಖವನ್ನು, ಆ ಪ್ರದೇಶಕ್ಕೆ ಸಂಬಂಧಪಟ್ಟಂತೆ, ಆ ಪ್ರದೇಶದಲ್ಲಿ ಜಾರಿಯಲ್ಲಿರುವ ಸಂವಾದಿ ಕಾನೂನು ಯಾವುದಾದರೂ ಇದ್ದರೆ ಅದಕ್ಕೆ ಮಾಡಿದ ಉಲ್ಲೇಖವೆಂದು ಅರ್ಥೈಸತಕ್ಕದ್ದು.

**3. ಪುರಾತನ ವಸ್ತುಗಳು ಮತ್ತು ಕಲಾನಿಧಿಗಳ ರಫ್ತು ವ್ಯಾಪಾರದ ನಿಯಂತ್ರಣ.–** (1) ಈ ಅಧಿನಿಯಮದ ಪ್ರಾರಂಭದಂದು ಮತ್ತು ಅಂದಿನಿಂದ, ಕೇಂದ್ರ ಸರ್ಕಾರ ಅಥವಾ ಈ ಬಗ್ಗೆ ಕೇಂದ್ರ ಸರ್ಕಾರವು ಅಧಿಕೃತಗೊಳಿಸಿದ ಯಾವುದೇ ಪ್ರಾಧಿಕಾರ ಅಥವಾ ಏಜೆನ್ಸಿಯನ್ನು ಹೊರತುಪಡಿಸಿ, ಯಾವನೇ ವ್ಯಕ್ತಿಯು ಯಾವುದೇ ಪುರಾತನ ವಸ್ತು ಅಥವಾ ಕಲಾನಿಧಿಯನ್ನು ರಫ್ತು ಮಾಡುವುದು ಕಾನೂನುಬದ್ಧವಾಗಿರತಕ್ಕದ್ದಲ್ಲ.

(2) ಕೇಂದ್ರ ಸರ್ಕಾರ ಅಥವಾ (1)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಿದ ಯಾವುದೇ ಪ್ರಾಧಿಕಾರ ಅಥವಾ ಏಜೆನ್ಸಿಯು, ಯಾವುದೇ ಪುರಾತನ ವಸ್ತು ಅಥವಾ ಕಲಾನಿಧಿಯನ್ನು ರಫ್ತು ಮಾಡಲು ಉದ್ದೇಶಿಸುವಾಗಲೆಲ್ಲ ಅಂಥ ರಫ್ತನ್ನು ನಿಯಮಿಸಬಹುದಾದಂಥ ಪ್ರಾಧಿಕಾರವು ಆ ಉದ್ದೇಶಕ್ಕಾಗಿ ಕೊಟ್ಟ ಪರ್ಮಿಟ್‌ನ ನಿಬಂಧನೆಗಳು ಮತ್ತು ಷರತ್ತುಗಳ ಮೇರೆಗೆ ಮತ್ತು ಅವುಗಳಿಗನುಸಾರವಾಗಿ ಮಾತ್ರವೇ ಮಾಡತಕ್ಕದ್ದು.

**4. 1962ರ ಅಧಿನಿಯಮ 52ರ ಅನ್ವಯ.–** ಯಾವ ಪುರಾತನ ವಸ್ತುಗಳು ಮತ್ತು ಕಲಾನಿಧಿಗಳನ್ನು ಯಾವನೇ ವ್ಯಕ್ತಿಯು (ಕೇಂದ್ರ ಸರ್ಕಾರ ಅಥವಾ ಕೇಂದ್ರ ಸರ್ಕಾರವು ಅಧಿಕೃತಗೊಳಿಸಿದ ಯಾವುದೇ ಪ್ರಾಧಿಕಾರ ಅಥವಾ ಏಜೆನ್ಸಿಯನ್ನು ಹೊರತುಪಡಿಸಿ) ರಫ್ತು ಮಾಡುವುದನ್ನು 3ನೇ ಪ್ರಕರಣದ ಮೇರೆಗೆ ನಿಷೇಧಿಸಲಾಗಿದೆಯೋ, ಆ ಯಾವುದೇ ಪುರಾತನ ವಸ್ತುಗಳು ಮತ್ತು ಕಲಾನಿಧಿಗಳಿಗೆ ಸಂಬಂಧಪಟ್ಟಂತೆ ಈ ಅಧಿನಿಯಮದ ಉಪಬಂಧಗಳಿಗೆ ಸೀಮಾಸುಂಕ ಅಧಿನಿಯಮ, 1962 – ಇದು ಅಸಂಗತವಾಗಿರುವಷ್ಟರ ಮಟ್ಟಿಗೆ ಹೊರತು ಮತ್ತು (ಆ ಅಧಿನಿಯಮದ 125ನೇ ಪ್ರಕರಣದಲ್ಲಿ ಏನೇ ಒಳಗೊಂಡಿದ್ದಾಗ್ಯೂ) ಆ ಅಧಿನಿಯಮದ ಮೇರೆಗೆ ಅಧಿಕೃತಗೊಳಿಸಿದ ಯಾವುದೇ ಅಧಿಹರಣವನ್ನು ಕೇಂದ್ರ ಸರ್ಕಾರವು ಈ ಬಗ್ಗೆ ತನಗೆ ಮಾಡಿಕೊಂಡ ಅರ್ಜಿಯ ಮೇಲೆ ಅನ್ಯಥಾ ನಿರ್ದೇಶಿಸಿದ ಹೊರತು ಮಾಡತಕ್ಕದ್ದು ಎಂಬುದನ್ನು ಹೊರತುಪಡಿಸಿ, ಪರಿಣಾಮ ಹೊಂದಿರತಕ್ಕದ್ದು.

**5. ಪುರಾತನ ವಸ್ತುಗಳನ್ನು ಲೈಸೆನ್ಸಿನ ಮೇರೆಗೆ ಮಾತ್ರವೇ ಮಾರಾಟ ಮಾಡತಕ್ಕದ್ದು.–** ಈ ಅಧಿನಿಯಮದ ಪ್ರಾರಂಭದಿಂದ ಆರು ತಿಂಗಳುಗಳ ಅವಧಿಯು ಮುಕ್ತಾಯವಾದ ದಿನಾಂಕದಿಂದ, ಯಾವನೇ ವ್ಯಕ್ತಿಯು, ಖುದ್ದಾಗಿ ಅಥವಾ ಅವನ ಪರವಾಗಿ ಯಾವನೇ ಇತರ ವ್ಯಕ್ತಿಯ ಮೂಲಕ, 8ನೇ ಪ್ರಕರಣದ ಮೇರೆಗೆ ಕೊಟ್ಟ ಲೈಸೆನ್ಸಿನ ನಿಬಂಧನೆಗಳು ಮತ್ತು ಷರತ್ತುಗಳ ಮೇರೆಗೆ ಮತ್ತು ಅವುಗಳಿಗೆ ಅನುಸಾರವಾಗಿ ಹೊರತು, ಯಾವುದೇ ಪುರಾತನ ವಸ್ತುವನ್ನು ಮಾರಾಟ ಮಾಡುವ ಅಥವಾ ಮಾರಾಟಕ್ಕಾಗಿ ಕೊಡಮಾಡುವ ವ್ಯವಹಾರವನ್ನು ನಡೆಸತಕ್ಕದ್ದಲ್ಲ.

**ವಿವರಣೆ.–** ಈ ಪ್ರಕರಣದಲ್ಲಿ ಮತ್ತು 7,8,12,13,14,17 ಮತ್ತು 18ನೇ ಪ್ರಕರಣಗಳಲ್ಲಿ, "ಪುರಾತನ ವಸ್ತು" ಎಂಬುದು ಸಂಸತ್ತಿನ ಮೂಲಕ ರಚಿಸಿದ ಕಾನೂನಿನ ಮೂಲಕ ಅಥವಾ ಅದರ ಮೇರೆಗೆ ರಾಷ್ಟ್ರೀಯ ಮಹತ್ವದ್ದಾಗಿರುವುದಾಗಿ ಘೋಷಿಸಿರುವವುಗಳನ್ನು ಹೊರತುಪಡಿಸಿ ಪ್ರಾಚೀನ ಮತ್ತು ಐತಿಹಾಸಿಕ ದಾಖಲೆಗಳನ್ನು ಒಳಗೊಳ್ಳುವುದಿಲ್ಲ.

**6. ಲೈಸೆನ್ಸು ಕೊಡುವ ಅಧಿಕಾರಿಗಳ ನೇಮಕಾತಿ.–** ಕೇಂದ್ರ ಸರ್ಕಾರವು ಅಧಿಸೂಚಿತ ಆದೇಶದ ಮೂಲಕ,–

(ಎ) ತಾನು ಸೂಕ್ತವೆಂದು ಯೋಚಿಸುವಂತೆ ಸರ್ಕಾರದ ಗೆಜೆಟೆಡ್ ಅಧಿಕಾರಿಗಳಾಗಿರುವಂಥ ವ್ಯಕ್ತಿಗಳನ್ನು ಈ ಅಧಿನಿಯಮದ ಉದ್ದೇಶಗಳಿಗಾಗಿ ಲೈಸೆನ್ಸು ಕೊಡುವ ಅಧಿಕಾರಿಗಳೆಂಬುದಾಗಿ ನೇಮಕ ಮಾಡಬಹುದು;

(ಬಿ) ಈ ಅಧಿನಿಯಮದ ಮೂಲಕ ಅಥವಾ ಅದರ ಮೇರೆಗೆ ಲೈಸೆನ್ಸನ್ನು ಕೊಡುವ ಅಧಿಕಾರಿಗಳಿಗೆ ಪ್ರದಾನ ಮಾಡಿರುವ ಅಧಿಕಾರಗಳನ್ನು ಲೈಸೆನ್ಸು ಕೊಡುವ ಅಧಿಕಾರಿಯು ಚಲಾಯಿಸತಕ್ಕಂಥ ಪ್ರದೇಶದ ಪರಿಮಿತಿಗಳನ್ನು ನಿರ್ಧರಿಸಬಹುದು.

**7. ಲೈಸೆನ್ಸಿಗಾಗಿ ಅರ್ಜಿ.–** (1) ಪುರಾತನ ವಸ್ತುಗಳನ್ನು ಮಾರಾಟ ಮಾಡುವ ಅಥವಾ ಮಾರಾಟಕ್ಕಾಗಿ ಕೊಡ ಮಾಡುವ ವ್ಯವಹಾರವನ್ನು ಖುದ್ದಾಗಿ ಅಥವಾ ತನ್ನ ಪರವಾಗಿ ಯಾವನೇ ಇತರ ವ್ಯಕ್ತಿಯ ಮೂಲಕ ನಡೆಸಲು ಇಚ್ಛಿಸುವ ಯಾವನೇ ವ್ಯಕ್ತಿಯು ಅಧಿಕಾರ ವ್ಯಾಪ್ತಿಯನ್ನು ಹೊಂದಿರುವ ಲೈಸೆನ್ಸು ಕೊಡುವ ಅಧಿಕಾರಿಗೆ, ಲೈಸೆನ್ಸಿನ ಮಂಜೂರಾತಿಗಾಗಿ ಅರ್ಜಿಯನ್ನು ಸಲ್ಲಿಸಬಹುದು.

(2) (1)ನೇ ಉಪಪ್ರಕರಣದ ಮೇರೆಗಿನ ಪ್ರತಿಯೊಂದು ಅರ್ಜಿಯನ್ನು, ನಿಯಮಿಸಬಹುದಾದಂಥ ನಮೂನೆಯಲ್ಲಿ ಸಲ್ಲಿಸತಕ್ಕದ್ದು ಮತ್ತು ಅದು ನಿಯಮಿಸಬಹುದಾದಂಥ ವಿವರಗಳನ್ನು ಒಳಗೊಂಡಿರತಕ್ಕದ್ದು.

**8. ಲೈಸೆನ್ಸಿನ ಮಂಜೂರಾತಿ.–** 7ನೇ ಪ್ರಕರಣದ ಮೇರೆಗೆ ಲೈಸೆನ್ಸಿನ ಮಂಜೂರಾತಿಗಾಗಿ ಅರ್ಜಿಯನ್ನು ಸ್ವೀಕರಿಸಿದ ಮೇಲೆ, ಲೈಸೆನ್ಸು ಕೊಡುವ ಆ ಅಧಿಕಾರಿಯು, ಅವನು ಸೂಕ್ತವೆಂದು ಭಾವಿಸುವಂಥ ವಿಚಾರಣೆಯನ್ನು ನಡೆಸಿದ ತರುವಾಯ, ಈ ಕೆಳಕಂಡ ಸಂಗತಿಗಳನ್ನು ಗಮನಿಸಿ, ಆ ಅರ್ಜಿದಾರನಿಗೆ ಲೈಸೆನ್ಸನ್ನು ಕೊಡಬಹುದು, ಎಂದರೆ:–

(ಎ) ಪುರಾತನ ವಸ್ತುಗಳಲ್ಲಿ ವ್ಯವಹಾರಕ್ಕೆ ಸಂಬಂಧಿಸಿದಂತೆ, ಆ ಅರ್ಜಿದಾರನ ಅನುಭವ;

(ಬಿ) ಅರ್ಜಿದಾರನು ವ್ಯವಹಾರವನ್ನು ನಡೆಸಲು ಉದ್ದೇಶಿಸಿರುವಂಥ ಗ್ರಾಮ, ಪಟ್ಟಣ ಅಥವಾ ನಗರ;

(ಸಿ) ಸದರಿ ಗ್ರಾಮ, ಪಟ್ಟಣ ಅಥವಾ ನಗರದಲ್ಲಿ ಪುರಾತನ ವಸ್ತುಗಳನ್ನು ಮಾರಾಟ ಮಾಡುವ ಅಥವಾ ಅವುಗಳನ್ನು ಮಾರಾಟಕ್ಕಾಗಿ ಕೊಡಮಾಡುವ ವ್ಯವಹಾರದಲ್ಲಿ ಈಗಾಗಲೇ ತೊಡಗಿರುವ ವ್ಯಕ್ತಿಗಳ ಸಂಖ್ಯೆ; ಮತ್ತು

(ಡಿ) ನಿಯಮಿಸಬಹುದಾದಂಥ ಇತರ ಸಂಗತಿಗಳು:

ಪರಂತು, ಯಾವುದೇ ಲೈಸೆನ್ಸನ್ನು ಆ ಅರ್ಜಿದಾರನಿಗೆ, ಅವನು ಪುರಾತನ ವಸ್ತುಗಳ (ರಫ್ತು ನಿಯಂತ್ರಣ) ಅಧಿನಿಯಮ, 1947 (1947ರ 31)ರ ಮೇರೆಗೆ ದಂಡನೀಯವಾದ ಅಪರಾಧದ ಬಗ್ಗೆ ಅಪರಾಧಿ ಎಂದು ನಿರ್ಣೀತನಾಗಿದ್ದರೆ, ಆ ಅಪರಾಧ ನಿರ್ಣಯದ ದಿನಾಂಕದಿಂದ ಹತ್ತು ವರ್ಷಗಳ ಅವಧಿಯು ಮುಕ್ತಾಯಗೊಂಡಿರುವ ಹೊರತು, ಕೊಡತಕ್ಕದ್ದಲ್ಲ.

(2) ಈ ಪ್ರಕರಣದ ಮೇರೆಗೆ ಮಂಜೂರು ಮಾಡಿದ ಪ್ರತಿಯೊಂದು ಲೈಸೆನ್ಸನ್ನು, ನಿಯಮಿಸಬಹುದಾದಂಥ ಫೀಜುಗಳನ್ನು ಸಂದಾಯ ಮಾಡಿದ ಮೇಲೆ ಕೊಡತಕ್ಕದ್ದು.

(3) ಈ ಪ್ರಕರಣದ ಮೇರೆಗೆ ಕೊಟ್ಟಿರುವ ಪ್ರತಿಯೊಂದು ಲೈಸೆನ್ಸು, ನಿಯಮಿಸಬಹುದಾದಂಥ ಅವಧಿಯವರೆಗೆ, ಅಂಥ ಷರತ್ತುಗಳಿಗೊಳಪಟ್ಟು ಮತ್ತು ಅಂಥ ನಮೂನೆಯಲ್ಲಿರತಕ್ಕದ್ದು ಮತ್ತು ಅದು ಅಂಥ ವಿವರಗಳನ್ನೊಳಗೊಂಡಿರತಕ್ಕದ್ದು.

(4) ಲೈಸೆನ್ಸಿನ ಮಂಜೂರಾತಿಗಾಗಿ 7ನೇ ಪ್ರಕರಣದ ಮೇರೆಗೆ ಸಲ್ಲಿಸಿದ ಯಾವುದೇ ಅರ್ಜಿಯನ್ನು ಆ ವಿಷಯದ ಬಗ್ಗೆ ಅರ್ಜಿದಾರನಿಗೆ ಅಹವಾಲು ಹೇಳಿಕೊಳ್ಳಲು ಯುಕ್ತ ಅವಕಾಶವನ್ನು ಕೊಟ್ಟ ಹೊರತು ತಿರಸ್ಕರಿಸತಕ್ಕದ್ದಲ್ಲ.

**9. ಲೈಸೆನ್ಸಿನ ನವೀಕರಣ.–** (1) 8ನೇ ಪ್ರಕರಣದ ಮೇರೆಗೆ ಕೊಟ್ಟಿರುವ ಲೈಸೆನ್ಸನ್ನು, ಲೈಸೆನ್ಸುದಾರನು ಸಲ್ಲಿಸಿರುವ ಅರ್ಜಿಯ ಮೇಲೆ, ಆ ಲೈಸೆನ್ಸು ಕೊಡುವ ಅಧಿಕಾರಿಯು ನಿಯಮಿಸಬಹುದಾದಂಥ ಅವಧಿಯವರೆಗೆ ಮತ್ತು ಅಂಥ ಫೀಜುಗಳನ್ನು ಸಂದಾಯ ಮಾಡಿದ ಮೇಲೆ, ನವೀಕರಿಸಬಹುದು.

(2) ಈ ಪ್ರಕರಣದ ಮೇರೆಗೆ ಸಲ್ಲಿಸಿರುವ ಯಾವುದೇ ಅರ್ಜಿಯನ್ನು, ಆ ಅರ್ಜಿದಾರನಿಗೆ ಆ ವಿಷಯದ ಬಗ್ಗೆ ಅಹವಾಲು ಹೇಳಿಕೊಳ್ಳಲು ಯುಕ್ತ ಅವಕಾಶವನ್ನು ಕೊಟ್ಟ ಹೊರತು, ತಿರಸ್ಕರಿಸತಕ್ಕದ್ದಲ್ಲ.

**10. ಲೈಸೆನ್ಸುದಾರನು, ದಾಖಲೆಗಳು, ಛಾಯಾಚಿತ್ರಗಳು ಮತ್ತು ರಿಜಿಸ್ಟರುಗಳನ್ನು ಇಟ್ಟುಕೊಂಡು ಬರುವುದು.–** (1) 8ನೇ ಪ್ರಕರಣದ ಮೇರೆಗೆ ಕೊಟ್ಟಿರುವ ಅಥವಾ 9ನೇ ಪ್ರಕರಣದ ಮೇರೆಗೆ ನವೀಕರಿಸಿರುವ ಲೈಸೆನ್ಸಿನ ಪ್ರತಿಯೊಬ್ಬ ಧಾರಕನು, ನಿಯಮಿಸಬಹುದಾದಂಥ ದಾಖಲೆಗಳು, ಛಾಯಾ ಚಿತ್ರಗಳು ಮತ್ತು ರಿಜಿಸ್ಟರುಗಳನ್ನು, ನಿಯಮಿಸಬಹುದಾದಂಥ ರೀತಿಯಲ್ಲಿ ಇಟ್ಟಿಕೊಂಡು ಬರತಕ್ಕದ್ದು, ಮತ್ತು ಅವು ನಿಯಮಿಸಬಹುದಾದಂಥ ವಿವರಗಳನ್ನು ಒಳಗೊಂಡಿರತಕ್ಕದ್ದು.

(2) (1)ನೇ ಉಪಪ್ರಕರಣದ ಮೇರೆಗೆ ಇಟ್ಟುಕೊಂಡು ಬಂದಿರುವ ಪ್ರತಿಯೊಂದು ದಾಖಲೆ, ಛಾಯಾಚಿತ್ರ ಮತ್ತು ರಿಜಿಸ್ಟರು, ಎಲ್ಲಾ ಯುಕ್ತ ಕಾಲಗಳಲ್ಲಿ ಲೈಸೆನ್ಸು ಕೊಡುವ ಅಧಿಕಾರಿಯು ಅಥವಾ ಈ ಬಗ್ಗೆ ಆ ಲೈಸೆನ್ಸು ಕೊಡುವ ಅಧಿಕಾರಿಯು ಬರಹದಲ್ಲಿ ಅಧಿಕೃತಗೊಳಿಸಿದ ಸರ್ಕಾರದ ಯಾವನೇ ಇತರ ಗೆಜೆಟೆಡ್ ಅಧಿಕಾರಿಯ ಪರಿಶೀಲನೆಗೆ ಮುಕ್ತವಾಗಿರತಕ್ಕದ್ದು.

**11. ಲೈಸೆನ್ಸುಗಳ ರದ್ದಿಯಾತಿ, ಅಮಾನತು ಮತ್ತು ತಿದ್ದುಪಡಿ.–** (1) ಲೈಸೆನ್ಸು ಕೊಡುವ ಅಧಿಕಾರಿಗೆ, ಈ ಬಗ್ಗೆ ಅವನಿಗೆ ಮಾಡಿರುವ ಉಲ್ಲೇಖದ ಮೇಲಾಗಲಿ ಅಥವಾ ಅನ್ಯಥಾ,–

(ಎ) 8ನೇ ಪ್ರಕರಣದ ಮೇರೆಗೆ ಕೊಟ್ಟಿರುವ ಲೈಸೆನ್ಸನ್ನು, ಅತ್ಯಾವಶ್ಯಕ ಸಂಗತಿಯ ತಪ್ಪು ನಿರೂಪಣೆಯ ಮೂಲಕ ಪಡೆದುಕೊಳ್ಳಲಾಗಿದೆಯೆಂದು; ಅಥವಾ

(ಬಿ) ಲೈಸೆನ್ಸು ಧಾರಕನು, ಯುಕ್ತ ಕಾರಣವಿಲ್ಲದೆ ಆ ಲೈಸೆನ್ಸನ್ನು ಯಾವ ಷರತ್ತುಗಳಿಗೆ ಒಳಪಟ್ಟು ಕೊಟ್ಟಿದೆಯೋ ಆ ಷರತ್ತುಗಳನ್ನು ಪಾಲುಸಲು ತಪ್ಪಿದ್ದಾನೆಂದು ಅಥವಾ ಈ ಅಧಿನಿಯಮದ ಯಾವುದೇ ಉಪಬಂಧವನ್ನು ಅಥವಾ ಅದರ ಮೇರೆಗೆ ರಚಿಸಿದ ನಿಯಮಗಳನ್ನು ಉಲ್ಲಂಘಿಸಿದ್ದಾನೆಂದು ಮನದಟ್ಟಾದರೆ

– ಆಗ, ಈ ಅಧಿನಿಯಮದ ಮೇರೆಗೆ ಆ ಲೈಸೆನ್ಸು ಧಾರಕನು ಗುರಿಯಾಗಬಹುದಾದಂಥ ಯಾವುದೇ ಇತರ ದಂಡಕ್ಕೆ ಬಾಧಕವಾಗದಂತೆ, ಲೈಸೆನ್ಸು ಕೊಡುವ ಅಧಿಕಾರಿಯು, ಆ ಲೈಸೆನ್ಸುದಾರಕನಿಗೆ ಕಾರಣ ತೋರಿಸಲು ಅವಕಾಶವನ್ನು ಕೊಟ್ಟ ತರುವಾಯ ಲೈಸೆನ್ಸನ್ನು ರದ್ದುಗೊಳಿಸಬಹುದು ಅಥವಾ ಅಮಾನತುಗೊಳಿಸಬಹುದು.

(2) ಈ ಬಗ್ಗೆ ರಚಿಸಬಹುದಾದಂಥ ಯಾವುವೇ ನಿಯಮಗಳಿಗೆ ಒಳಪಟ್ಟು, ಲೈಸೆನ್ಸು ಕೊಡುವ ಅಧಿಕಾರಿಯು 8ನೇ ಪ್ರಕರಣದ ಮೇರೆಗೆ ಕೊಟ್ಟಿರುವ ಲೈಸೆನ್ಸನ್ನು ಸಹ ವ್ಯತ್ಯಸ್ತಗೊಳಿಸಬಹುದು ಅಥವಾ ತಿದ್ದುಪಡಿ ಮಾಡಬಹುದು.

**12. ಯಾರ ಲೈಸೆನ್ಸುಗಳನ್ನು ರದ್ದುಗೊಳಿಸಲಾಗಿದೆಯೋ ಆ ವ್ಯಕ್ತಿಗಳು ಪುರಾತನ ವಸ್ತುಗಳನ್ನು ಇತರ ಲೈಸೆನ್ಸುದಾರರಿಗೆ ಮಾರಾಟ ಮಾಡಬಹುದು.–** 5ನೇ ಪ್ರಕರಣದಲ್ಲಿ ಏನೇ ಅಡಕವಾಗಿದ್ದಾಗ್ಯೂ, 11ನೇ ಪ್ರಕರಣದ ಮೇರೆಗೆ ಲೈಸೆನ್ಸನ್ನು ರದ್ದುಗೊಳಿಸಲಾಗಿರುವಂಥ ಯಾವನೇ ವ್ಯಕ್ತಿಯು, ಲೈಸೆನ್ಸು ಕೊಡುವ ಅಧಿಕಾರಿಯ ಮುಂದೆ, ನಿಯಮಿಸಬಹುದಾದಂಥ ಅವಧಿಯೊಳಗೆ ನಿಯಮಿಸಬಹುದಾದಂಥ ನಮೂನೆಯಲ್ಲಿ ಮತ್ತು ನಿಯಮಿಸಬಹುದಾದಂಥ ರೀತಿಯಲ್ಲಿ ಅಂಥ ರದ್ದಿಯಾತಿಯ ನಿಕಟ ಪೂರ್ವದಲ್ಲಿ ಅವನ ಒಡೆತನ, ನಿಯಂತ್ರಣ ಅಥವಾ ಸ್ವಾಧೀನದಲ್ಲಿರುವ ಎಲ್ಲಾ ಪುರಾತನ ವಸ್ತುಗಳ ಬಗ್ಗೆ ಘೋಷಣೆಯನ್ನು ಮಾಡಿದ ತರುವಾಯ ಈ ಅಧಿನಿಯಮದ ಮೇರೆಗೆ ಸಿಂಧುವಾದ ಲೈಸೆನ್ಸನ್ನು ಹೊಂದಿರುವ ಯಾವನೇ ಇತರ ವ್ಯಕ್ತಿಗೆ ಅಂಥ ಪುರಾತನ ವಸ್ತುಗಳನ್ನು ಮಾರಾಟ ಮಾಡಬಹುದು:

ಪರಂತು, ಅಂಥ ಯಾವುದೇ ಪುರಾತನ ವಸ್ತುವನ್ನು, ಆ ಲೈಸೆನ್ಸನ್ನು ರದ್ದುಗೊಳಿಸಿದ ದಿನಾಂಕದಿಂದ ಆರು ತಿಂಗಳುಗಳ ಅವಧಿಯು ಮುಕ್ತಾಯವಾದ ತರುವಾಯ ಮಾರಾಟ ಮಾಡತಕ್ಕದ್ದಲ್ಲ.

**13. ಇತರರನ್ನು ಹೊರತುಪಡಿಸಿ, ಪುರಾತನ ವಸ್ತುಗಳನ್ನು ಮಾರಾಟ ಮಾಡುವ ವ್ಯವಹಾರವನ್ನು ನಡೆಸಲು ಕೇಂದ್ರ ಸರ್ಕಾರಕ್ಕೆ ಅಧಿಕಾರ.–** (1) ಕೇಂದ್ರ ಸರ್ಕಾರವು, ಪುರಾತನ ವಸ್ತುಗಳನ್ನು ಸಂರಕ್ಷಿಸುವ ದೃಷ್ಟಿಯಿಂದ ಅಥವಾ ಸಾರ್ವಜನಿಕ ಹಿತಾಸಕ್ತಿಯಲ್ಲಿ ಹಾಗೆ ಮಾಡುವುದು ಅವಶ್ಯ ಅಥವಾ ವಿಹಿತವೆಂದು ಅಭಿಪ್ರಾಯಪಟ್ಟರೆ, ಅದು ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ, ಆ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದಂಥ ದಿನಾಂಕದಂದು ಮತ್ತು ಅಂಥ ದಿನಾಂಕದಿಂದ ಜಾರಿಗೆ ಬರುವಂತೆ ಕೇಂದ್ರ ಸರ್ಕಾರ ಅಥವಾ ಈ ಬಗ್ಗೆ ಕೇಂದ್ರ ಸರ್ಕಾರವು ಅಧಿಕೃತಗೊಳಿಸಿದ ಯಾವುದೇ ಪ್ರಾಧಿಕಾರ ಅಥವಾ ಏಜೆನ್ಸಿಯು ಮಾತ್ರವೇ ಪುರಾತನ ವಸ್ತುಗಳನ್ನು ಮಾರಾಟ ಮಾಡುವ ಅಥವಾ ಅವುಗಳನ್ನು ಮಾರಾಟಕ್ಕಾಗಿ ಕೊಡಮಾಡುವ ವ್ಯವಹಾರವನ್ನು ನಡೆಸಲು ಹಕ್ಕುಳ್ಳದ್ದಾಗಿರತಕ್ಕದೆಂದು ಘೋಷಿಸಬಹುದು.

(2) (1)ನೇ ಉಪಪ್ರಕರಣದ ಮೇರೆಗಿನ ಅಧಿಸೂಚನೆಯನ್ನು ಹೊರಡಿಸಿದ ಮೇಲೆ,–

(ಎ) ಕೇಂದ್ರ ಸರ್ಕಾರ ಅಥವಾ ಕೇಂದ್ರ ಸರ್ಕಾರವು ಅಧಿಕೃತಗೊಳಿಸಿದ ಯಾವುದೇ ಪ್ರಾಧಿಕಾರ ಅಥವಾ ಏಜೆನ್ಸಿಯನ್ನು ಹೊರತುಪಡಿಸಿ ಇತರ ಯಾವನೇ ವ್ಯಕ್ತಿ, ಪ್ರಾಧಿಕಾರ ಅಥವಾ ಏಜೆನ್ಸಿಯು, ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಿದ ದಿನಾಂಕದಂದು ಮತ್ತು ಆ ದಿನಾಂಕದಿಂದ ಯಾವುದೇ ಪುರಾತನ ವಸ್ತುವನ್ನು ಮಾರಾಟ ಮಾಡುವ ಅಥವಾ ಅದನ್ನು ಮಾರಾಟಕ್ಕಾಗಿ ಕೊಡಮಾಡುವ ವ್ಯವಹಾರವನ್ನು ನಡೆಸುವುದು ಕಾನೂನು ಬದ್ಧವಾಗಿರತಕ್ಕದ್ದಲ್ಲ;

(ಬಿ) ಈ ಅಧಿನಿಯಮದ ಉಪಬಂಧಗಳು, ಪುರಾತನ ವಸ್ತುಗಳನ್ನು ಮಾರಾಟ ಮಾಡುವ ಅಥವಾ ಅವುಗಳನ್ನು ಮಾರಾಟಕ್ಕಾಗಿ ಕೊಡಮಾಡುವ ವ್ಯವಹಾರವನ್ನು ನಡೆಸುತ್ತಿರುವ ವ್ಯಕ್ತಿಗಳಿಗೆ ಲೈಸೆನ್ಸು ಕೊಡುವುದಕ್ಕೆ ಅವು ಸಂಬಂಧಪಡುವಷ್ಟರ ಮಟ್ಟಿಗೆ, ಅವುಗಳ ಪ್ರವರ್ತನೆಯು ಮುಕ್ತಾಯಗೊಳ್ಳುವುದಕ್ಕೆ ಮುಂಚೆ ಮಾಡಿದ ಅಥವಾ ಮಾಡದೆ ಬಿಟ್ಟ ಕಾರ್ಯಗಳಿಗೆ ಸಂಬಂಧಿಸಿದಂತೆ ಹೊರತು, ಅವು ಪರಿಣಾಮಕಾರಿಯಾಗಿರುವುದು ಮುಕ್ತಾಯಗೊಳ್ಳತಕ್ಕದ್ದು ಮತ್ತು ಸಾಮಾನ್ಯ ಖಂಡಗಳ ಅಧಿನಿಯಮ, 1897 (1897ರ 10)ರ 6ನೇ ಪ್ರಕರಣವು, ಅಂಥ ಪ್ರವರ್ತನೆಯು ಮುಕ್ತಾಯಗೊಂಡ ಮೇಲೆ ಆ ಉಪಬಂಧಗಳನ್ನು ಕೇಂದ್ರ ಅಧಿನಿಯಮದ ಮೂಲಕ ನಿರಸನಗೊಳಿಸಿರದಿದ್ದರೆ ಹೇಗೋ ಹಾಗೆ ಅನ್ವಯವಾಗತಕ್ಕದ್ದು:

ಪರಂತು, 8ನೇ ಪ್ರಕರಣದ ಮೇರೆಗೆ ಕೊಟ್ಟ ಮತ್ತು ಹಿಂದೆ ಹೇಳಿದ ದಿನಾಂಕದಂದು ಜಾರಿಯಲ್ಲಿದ್ದ ಪ್ರತಿಯೊಂದು ಲೈಸೆನ್ಸು, ಅದರಲ್ಲಿ ನಿರ್ದಿಷ್ಟಪಡಿಸಿದ ಅವಧಿಯು ಮುಕ್ತಾಯಗೊಂಡಿರದೆ ಇದ್ದಾಗ್ಯೂ, ಜಾರಿಯಲ್ಲಿರುವುದು ಮುಕ್ತಾಯಗೊಳ್ಳತಕ್ಕದ್ದು.

(3) ಯಾರ ಲೈಸೆನ್ಸು (2)ನೇ ಉಪಪ್ರಕರಣದ (ಬಿ) ಖಂಡದ ಪರಂತುಕದ ಮೇರೆಗೆ ಜಾರಿಯಲ್ಲಿರುವುದು ಮುಕ್ತಾಯಗೊಂಡಿದೆಯೋ ಆ ಪ್ರತಿಯೊಬ್ಬ ವ್ಯಕ್ತಿಯು, ನಿಯಮಿಸಬಹುದಾದಂಥ ಅವಧಿಯೊಳಗೆ, ಅಂಥ ನಮೂನೆಯಲ್ಲಿ ಮತ್ತು ಅಂಥ ರೀತಿಯಲ್ಲಿ ಲೈಸೆನ್ಸು ಕೊಡುವ ಅಧಿಕಾರಿಯ ಮುಂದೆ (1)ನೇ ಉಪ ಪ್ರಕರಣದ ಮೇರೆಗೆ ಹೊರಡಿಸಿದ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಿದ ದಿನಾಂಕಕ್ಕೆ ನಿಕಟಪೂರ್ವದಲ್ಲಿ ಅವನ ಒಡೆತನ, ನಿಯಂತ್ರಣ ಅಥವಾ ಸ್ವಾಧೀನದಲ್ಲಿದ್ದ ಎಲ್ಲಾ ಪುರಾತನ ವಸ್ತುಗಳ ಬಗ್ಗೆ ಘೋಷಣೆಯನ್ನು ಮಾಡತಕ್ಕದ್ದು.

**14. ಪುರಾತನ ವಸ್ತುಗಳ ನೋಂದಣಿ.–** (1) ಕೇಂದ್ರ ಸರ್ಕಾರವು, ಕಾಲಕಾಲಕ್ಕೆ ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ, ಈ ಅಧಿನಿಯಮದ ಮೇರೆಗೆ ನೋಂದಾಯಿಸತಕ್ಕಂಥ ಪುರಾತನ ವಸ್ತುಗಳನ್ನು ನಿರ್ದಿಷ್ಟಪಡಿಸಬಹುದು.

(2) (1)ನೇ ಉಪಪ್ರಕರಣದ ಮೇರೆಗೆ ಆ ಪುರಾತನ ವಸ್ತುಗಳನ್ನು ನಿರ್ದಿಷ್ಟಪಡಿಸುವಲ್ಲಿ, ಕೇಂದ್ರ ಸರ್ಕಾರವು, ಈ ಕೆಳಕಂಡ ಸಂಗತಿಗಳನ್ನು ಗಮನಿಸತಕ್ಕದ್ದು, ಎಂದರೆ:–

(i) ಕಲಾ ವಸ್ತುಗಳನ್ನು ಸಂರಕ್ಷಿಸುವ ಅವಶ್ಯಕತೆ;

(ii) ಭಾರತದ ಸಾಂಸ್ಕೃತಿಕ ಪರಂಪರೆಯ ಉತ್ತಮ ಪರಿಜ್ಞಾನಕ್ಕಾಗಿ, ಭಾರತದೊಳಗಿನ ಅಂಥ ಪದಾರ್ಥಗಳನ್ನು ಪರಿರಕ್ಷಿಸುವ ಅವಶ್ಯಕತೆ;

(iii) ಭಾರತದ ಸಾಂಸ್ಕೃತಿಕ ಪರಂಪರೆಯ ರಕ್ಷಣೆಗೆ ಸಹಾಯಕವಾಗುವ ಅಥವಾ ಸಹಾಯಕವಾಗುವ ಸಂಭವವಿರುವಂಥ ಇತರ ಸಂಗತಿಗಳು.

(3) (1)ನೇ ಉಪಪ್ರಕರಣದ ಮೇರೆಗೆ ಹೊರಡಿಸಿದ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಿದ ಯಾವುದೇ ಪುರಾತನ ವಸ್ತುವಿನ ಒಡೆತನ, ನಿಯಂತ್ರಣ ಅಥವಾ ಸ್ವಾಧೀನವನ್ನು ಹೊಂದಿರುವ ಪ್ರತಿಯೊಬ್ಬ ವ್ಯಕ್ತಿಯು, ನೋಂದಣಿ ಅಧಿಕಾರಿಯ ಮುಂದೆ, ಅಂಥ ಪುರಾತನ ವಸ್ತುವನ್ನು,–

(ಎ) ಅಂಥ ಅಧಿಸೂಚನೆಯನ್ನು ಹೊರಡಿಸಿದ ದಿನಾಂಕದಂದು, ಅಂಥ ಪುರಾತನ ವಸ್ತುವಿನ ಒಡೆತನ, ನಿಯಂತ್ರಣ ಅಥವಾ ಸ್ವಾಧೀನವನ್ನು ಹೊಂದಿರುವ ವ್ಯಕ್ತಿಯ ಸಂದರ್ಭದಲ್ಲಿ, ಅಂಥ ದಿನಾಂಕದಿಂದ ಮೂರು ತಿಂಗಳೊಳಗೆ; ಮತ್ತು

(ಬಿ) ಯಾವನೇ ಇತರ ವ್ಯಕ್ತಿಯ ಸಂದರ್ಭದಲ್ಲಿ, ಅಂಥ ಪುರಾತನ ವಸ್ತುವು ಅವನ ಒಡೆತನ, ನಿಯಂತ್ರಣ ಅಥವಾ ಸ್ವಾಧೀನಕ್ಕೆ ಬಂದಂಥ ದಿನಾಂಕದಿಂದ ಹದಿನೈದು ದಿವಸಗಳೊಳಗೆ

– ನೋಂದಾಯಿಸತಕ್ಕದ್ದು, ಮತ್ತು ಅಂಥ ನೋಂದಣಿಯ ಗುರುತಾಗಿ ಒಂದು ಪ್ರಮಾಣ ಪತ್ರವನ್ನು ಪಡೆದುಕೊಳ್ಳತಕ್ಕದ್ದು.

**15. ನೋಂದಣಿ ಅಧಿಕಾರಿಗಳ ನೇಮಕಾತಿ.–** ಕೇಂದ್ರ ಸರ್ಕಾರವು, ಅಧಿಸೂಚಿತ ಆದೇಶದ ಮೂಲಕ,–

(ಎ) ಈ ಅಧಿನಿಯಮದ ಉದ್ದೇಶಗಳಿಗಾಗಿ, ನೋಂದಣಿ ಅಧಿಕಾರಿಗಳಾಗಿರಲು ತಾನು ಸೂಕ್ತವೆಂದು ಯೋಚಿಸುವಂಥ ವ್ಯಕ್ತಿಗಳನ್ನು ನೇಮಕ ಮಾಡಬಹುದು; ಮತ್ತು

(ಬಿ) ಈ ಅಧಿನಿಯಮದ ಮೂಲಕ ಅಥವಾ ಅದರ ಮೇರೆಗೆ, ನೋಂದಣಿ ಅಧಿಕಾರಿಗಳಿಗೆ ಪ್ರದಾನ ಮಾಡಿದ ಅಧಿಕಾರಗಳನ್ನು ನೋಂದಣಿ ಅಧಿಕಾರಿಯು ಚಲಾಯಿಸತಕ್ಕಂಥ ಪ್ರದೇಶದ ಪರಿಮಿತಿಗಳನ್ನು ನಿರ್ಧರಿಸಬಹುದು.

**16. ನೋಂದಣಿ ಮತ್ತು ನೋಂದಣಿಯ ಪ್ರಮಾಣಪತ್ರದ ಮಂಜೂರಾತಿಗಾಗಿ ಅರ್ಜಿ.–** (1) 14ನೇ ಪ್ರಕರಣದ ಮೇರೆಗೆ ನೋಂದಣಿ ಅಧಿಕಾರಿಯ ಮುಂದೆ ಯಾವುದೇ ಪುರಾತನ ವಸ್ತುವನ್ನು ನೋಂದಾಯಿಸಲು ಅಗತ್ಯಪಡಿಸಲಾಗಿರುವ ಪ್ರತಿಯೊಬ್ಬ ವ್ಯಕ್ತಿಯು, ನೋಂದಣಿ ಪ್ರಮಾಣಪತ್ರದ ಮಂಜೂರಾತಿಗಾಗಿ ನೋಂದಣಿ ಅಧಿಕಾರಿಗೆ ಅರ್ಜಿಯನ್ನು ಸಲ್ಲಿಸತಕ್ಕದ್ದು.

(2) (1)ನೇ ಉಪಪ್ರಕರಣದ ಮೇರೆಗಿನ ಪ್ರತಿಯೊಂದು ಅರ್ಜಿಯೊಂದಿಗೆ, ಕೇಂದ್ರ ಸರ್ಕಾರವು, ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ನಿರ್ದಿಷ್ಟಪಡಿಸಬಹುದಾದಂಥ ಪುರಾತನ ವಸ್ತುಗಳ ಅಥವಾ ಪುರಾತನ ವಸ್ತುಗಳ ವರ್ಗದ ಸಂದರ್ಭದಲ್ಲಿ, ನಿಯಮಿಸಬಹುದಾಂತೆ ನೋಂದಾಯಿಸಬೇಕಾದಂಥ ಪುರಾತನ ವಸ್ತುವಿನ ಛಾಯಾಚಿತ್ರಗಳು ಮತ್ತು ಆರಕ್ಕೆ ಮೀರದಷ್ಟು ಸಂಖ್ಯೆಯ ಪ್ರತಿಗಳು ಇರತಕ್ಕದ್ದು ಮತ್ತು ಅರ್ಜಿಯನ್ನು ನಿಯಮಿಸಬಹುದಾದಂಥ ನಮೂನೆಯಲ್ಲಿ ಸಲ್ಲಿಸತಕ್ಕದ್ದು ಮತ್ತು ನಿಯಮಿಸಬಹುದಾದಂಥ ವಿವರಗಳನ್ನು ಅದು ಒಳಗೊಂಡಿರತಕ್ಕದ್ದು.

(3) (1)ನೇ ಉಪ್ರಕರಣದ ಮೇರೆಗಿನ ಅರ್ಜಿಯನ್ನು ಸ್ವೀಕರಿಸಿದ ಮೇಲೆ, ಆ ನೋಂದಣಿ ಅಧಿಕಾರಿಯು, ತಾನು ಸೂಕ್ತವೆಂದು ಭಾವಿಸುವಂಥ ವಿಚಾರಣೆಯನ್ನು ನಡೆಸಿದ ತರುವಾಯ, ನಿಯಮಿಸಬಹುದಾದಂಥ ವಿವರಗಳನ್ನೊಳಗೊಂಡಿರುವ ನೋಂದಣಿ ಪ್ರಮಾಣ ಪತ್ರವನ್ನು ಕೊಡಬಹುದು.

(4) ಈ ಪ್ರಕರಣದ ಮೇರೆಗೆ ಸಲ್ಲಿಸಿರುವ ಯಾವುದೇ ಅರ್ಜಿಯನ್ನು, ಆ ಅರ್ಜಿದಾರನಿಗೆ ಆ ವಿಷಯದ ಬಗ್ಗೆ ಅಹವಾಲನ್ನು ಹೇಳಿಕೊಳ್ಳಲು ಯುಕ್ತ ಅವಕಾಶವನ್ನು ಕೊಟ್ಟ ಹೊರತು ತಿರಸ್ಕರಿಸತಕ್ಕದ್ದಲ್ಲ.

**17. ಪುರಾತನ ವಸ್ತುಗಳ ಒಡೆತನ ಇತ್ಯಾದಿಗಳ ವರ್ಗಾವಣೆಯನ್ನು ನೋಂದಣಿ ಅಧಿಕಾರಿಗೆ ತಿಳಿಸತಕ್ಕದ್ದು.–** ಯಾವನೇ ವ್ಯಕ್ತಿಯು, 14ನೇ ಪ್ರಕರಣದ (1)ನೇ ಉಪ ಪ್ರಕರಣದ ಮೇರೆಗೆ ಹೊರಡಿಸಿದ ಯಾವುದೇ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಿದ ಯಾವುದೇ ಪುರಾತನ ವಸ್ತುವಿನ ಒಡೆತನ, ನಿಯಂತ್ರಣ ಅಥವಾ ಸ್ವಾಧೀನವನ್ನು ವರ್ಗಾವಣೆ ಮಾಡಿದಾಗಲೆಲ್ಲಾ, ಅಂಥ ವ್ಯಕ್ತಿಯು, ನಿಯಮಿಸಬಹುದಾದಂಥ ಅವಧಿಯೊಳಗೆ ಮತ್ತು ನಿಯಮಿಸಬಹುದಾದಂಥ ನಮೂನೆಯಲ್ಲಿ ಅಂಥ ವರ್ಗಾವಣೆಯ ಸಂಗತಿಯನ್ನು ಆ ನೋಂದಣಿ ಅಧಿಕಾರಿಗೆ ತಿಳಿಸತಕ್ಕದ್ದು.

**18. 14, 16 ಮತ್ತು 17ನೇ ಪ್ರಕರಣಗಳ ಉಪಬಂಧಗಳು ಕೆಲವು ಸಂದರ್ಭಗಳಲ್ಲಿ ಅನ್ವಯವಾಗತಕ್ಕದ್ದಲ್ಲ.–** 14ನೇ ಪ್ರಕರಣದ ಅಥವಾ 16ನೇ ಪ್ರಕರಣ ಅಥವಾ 17ನೇ ಪ್ರಕರಣದಲ್ಲಿರುವುದು ಯಾವುದೂ, ಕೇಂದ್ರ ಸರ್ಕಾರ ಅಥವಾ ಕಾರಣಗಳನ್ನು ಬರಹದಲ್ಲಿ ದಾಖಲ್ಮಾಡಿ ಕೇಂದ್ರ ಸರ್ಕಾರವು ಸಾಮಾನ್ಯ ಅಥವಾ ವಿಶೇಷ ಆದೇಶದ ಮೂಲಕ ಈ ಪ್ರಕರಣದ ಉದ್ದೇಶಕ್ಕಾಗಿ ಅನುಮೋದಿಸಬಹುದಾದಂಥ ಯಾವುದೇ ಸ್ಥಳೀಯ ಪ್ರಾಧಿಕಾರ ಅಥವಾ ಯಾವುದೇ ನಿಕಾಯದ ಒಡೆತನ, ನಿಯಂತ್ರಣ ಅಥವಾ ವ್ಯವಸ್ಥಾಪನೆಯಲ್ಲಿರುವ,–

(i) ವಸ್ತು ಸಂಗ್ರಹಾಲಯದಲ್ಲಿ; ಅಥವಾ

(ii) ಕಚೇರಿಯಲ್ಲಿ; ಅಥವಾ

(iii) ಪತ್ರಾಗಾರದಲ್ಲಿ; ಅಥವಾ

(iv) ಶೈಕ್ಷಣಿಕ ಅಥವಾ ಸಾಂಸ್ಕೃತಿಕ ಸಂಸ್ಥೆಯಲ್ಲಿ

– ಇಟ್ಟಿರುವ ಯಾವುದೇ ಪುರಾತನ ವಸ್ತುವಿಗೆ ಅನ್ವಯವಾಗತಕ್ಕದ್ದಲ್ಲ.

**19. ಪುರಾತನ ವಸ್ತುಗಳು ಮತ್ತು ಕಲಾನಿಧಿಗಳನ್ನು ಕಡ್ಡಾಯವಾಗಿ ಆರ್ಜಿಸಲು ಕೇಂದ್ರ ಸರ್ಕಾರದ ಅಧಿಕಾರ.–** (1) ಕೇಂದ್ರ ಸರ್ಕಾರವು ಸಾರ್ವಜನಿಕ ಸ್ಥಳದಲ್ಲಿ ಯಾವುದೇ ಪುರಾತನ ವಸ್ತು ಅಥವಾ ಕಲಾನಿಧಿಯನ್ನು ಪರಿರಕ್ಷಿಸುವುದು ಅಪೇಕ್ಷಣೀಯವೆಂದು ಅಭಿಪ್ರಾಯಪಟ್ಟರೆ, ಆ ಸರ್ಕಾರವು, ಅಂಥ ಪುರಾತನ ವಸ್ತು ಅಥವಾ ಕಲಾನಿಧಿಯನ್ನು ಕಡ್ಡಾಯವಾಗಿ ಆರ್ಜಿಸಲು ಆದೇಶವನ್ನು ಮಾಡಬಹುದು.

(2) (1)ನೇ ಉಪಪ್ರಕರಣದ ಮೇರೆಗೆ ಆದೇಶವನ್ನು ಮಾಡಿದ ಮೇಲೆ, ಅಂಥ ಪುರಾತನ ವಸ್ತು ಅಥವಾ ಕಲಾನಿಧಿಯನ್ನು ಇಟ್ಟಿರುವಂಥ ಜಿಲ್ಲೆಯ ಕಲೆಕ್ಟರನು, ಅದನ್ನು ಆರ್ಜಿಸುವ ಬಗ್ಗೆ ಕೇಂದ್ರ ಸರ್ಕಾರದ ತೀರ್ಮಾನವನ್ನು ಅದರ ಒಡೆಯನಿಗೆ ತಿಳಿಸುವ ನೋಟೀಸನ್ನು ಕೊಡತಕ್ಕದ್ದು; ಮತ್ತು ಆ ಕಲೆಕ್ಟರನಿಗೆ ಅಂಥ ಪುರಾತನ ವಸ್ತು ಅಥವಾ ಕಲಾನಿಧಿಯ ಸ್ವಾಧೀನವನ್ನು ತೆಗೆದುಕೊಳ್ಳುವುದು ಕಾನೂನು ಸಮ್ಮತವಾಗಿರತಕ್ಕದ್ದು; ಆ ಉದ್ದೇಶಕ್ಕಾಗಿ ಕಲೆಕ್ಟರನು, ಅವಶ್ಯವಾಗಬಹುದಾದಂಥ ಬಲವನ್ನು ಉಪಯೋಗಿಸಬಹುದು.

(3) ಯಾವ ಪುರಾತನ ವಸ್ತು ಅಥವಾ ಕಲಾನಿಧಿಯ ಸ್ವಾಧೀನವನ್ನು (2)ನೇ ಉಪಪ್ರಕರಣದ ಮೇರೆಗೆ ಕಲೆಕ್ಟರನು ತೆಗೆದುಕೊಂಡಿರುವನೋ ಆ ಯಾವುದೇ ಪುರಾತನ ವಸ್ತು ಅಥವಾ ಕಲಾನಿಧಿಯ ಒಡೆಯನು, ಹಾಗೆ ಸ್ವಾಧೀನವನ್ನು ತೆಗೆದುಕೊಂಡಿರುವುದನ್ನು ಆಕ್ಷೇಪಿಸಿದರೆ, ಅವನು, ಅಂಥ ಸ್ವಾಧೀನವನ್ನು ತೆಗೆದುಕೊಂಡಂಥ ದಿನಾಂಕದಿಂದ ಮೂವತ್ತು ದಿವಸಗಳ ಅವಧಿಯೊಳಗೆ ತನ್ನ ಆಕ್ಷೇಪಣೆಗಳನ್ನು ನಿರೂಪಿಸಿ, ಕೇಂದ್ರ ಸರ್ಕಾರಕ್ಕೆ ಮನವಿಯನ್ನು ಮಾಡಿಕೊಳ್ಳಬಹುದು:

ಪರಂತು, ಕೇಂದ್ರ ಸರ್ಕಾರವು, ಮೂವತ್ತು ದಿವಸಗಳ ಅವಧಿಯು ಮುಕ್ತಾಯವಾದ ತರುವಾಯ, ಸಕಾಲದಲ್ಲಿ ಮನವಿಯನ್ನು ಮಾಡಿಕೊಳ್ಳಲು ಅಂಥ ಪುರಾತನ ವಸ್ತು ಅಥವಾ ಕಲಾನಿಧಿಯ ಒಡೆಯನಿಗೆ ಸಾಕಷ್ಟು ಕಾರಣಗಳಿಂದ ಅಡ್ಡಿಯಾಗಿದ್ದಿತೆಂದು ಮನದಟ್ಟಾದರೆ ಆ ಮನವಿಯನ್ನು ಪುರಸ್ಕರಿಸಬಹುದು.

(4) (3)ನೇ ಉಪಪ್ರಕರಣದ ಮೇರೆಗೆ ಯಾವುದೇ ಮನವಿಯನ್ನು ಸ್ವೀಕರಿಸಿದ ಮೇಲೆ, ಕೇಂದ್ರ ಸರ್ಕಾರವು, ಅದು ಸೂಕ್ತವೆಂದು ಭಾವಿಸುವಂಥ ವಿಚಾರಣೆಯನ್ನು ನಡೆಸಿದ ತರುವಾಯ, ಆಕ್ಷೇಪಕನಿಗೆ ಆ ವಿಷಯದ ಬಗ್ಗೆ ಅಹವಾಲನ್ನು ಹೇಳಿಕೊಳ್ಳಲು ಅವಕಾಶವನ್ನು ಕೊಟ್ಟ ತರುವಾಯ, ಆ ಮನವಿಯನ್ನು ಸ್ವೀಕರಿಸಿದ ದಿನಾಂಕದಿಂದ ತೊಂಬತ್ತು ದಿವಸಗಳ ಅವಧಿಯೊಳಗೆ, (1)ನೇ ಉಪಪ್ರಕರಣದ ಮೇರೆಗೆ ತಾನು ಮಾಡಿದ ಆದೇಶವನ್ನು ರದ್ದುಗೊಳಿಸತಕ್ಕದ್ದು ಅಥವಾ ಸ್ಥಿರೀಕರಿಸತಕ್ಕದ್ದು.

(5) (1)ನೇ ಉಪಪ್ರಕರಣದ ಮೇರೆಗೆ ಕೇಂದ್ರ ಸರ್ಕಾರವು ಮಾಡಿದ ಯಾವುದೇ ಆದೇಶವನ್ನು (4)ನೇ ಉಪಪ್ರಕರಣದ ಮೇರೆಗೆ ರದ್ದುಗೊಳಿಸಿರುವಲ್ಲಿ, ಆ ಪುರಾತನ ವಸ್ತು ಅಥವಾ ಕಲಾನಿಧಿಯನ್ನು ಅದರ ಒಡೆಯನಿಗೆ ವಿಳಂಬವಿಲ್ಲದೆ ಮತ್ತು ಕೇಂದ್ರ ಸರ್ಕಾರದ ವೆಚ್ಚದಲ್ಲಿ ಹಿಂತಿರುಗಿಸತಕ್ಕದ್ದು.

(6) (1)ನೇ ಉಪಪ್ರಕರಣದ ಮೇರೆಗೆ ಕೇಂದ್ರ ಸರ್ಕಾರವು ಮಾಡಿದ ಆದೇಶವನ್ನು, (4)ನೇ ಉಪಪ್ರಕರಣದ ಮೇರೆಗೆ ಸ್ಥಿರೀಕರಿಸಿರುವಲ್ಲಿ, ಆ ಪುರಾತನ ವಸ್ತು ಅಥವಾ ಕಲಾನಿಧಿಯು (2)ನೇ ಉಪಪ್ರಕರಣದ ಮೇರೆಗೆ ಕಲೆಕ್ಟರನು ಅದರ ಸ್ವಾಧೀನವನ್ನು ತೆಗೆದುಕೊಂಡ ದಿನಾಂಕದಿಂದ ಜಾರಿಗೆ ಬರುವಂತೆ ಕೇಂದ್ರ ಸರ್ಕಾರದಲ್ಲಿ ನಿಹಿತಗೊಳ್ಳತಕ್ಕದ್ದು.

(7) ಈ ಪ್ರಕರಣದಿಂದ ಪ್ರದತ್ತವಾದ ಕಡ್ಡಾಯವಾಗಿ ಅರ್ಜಿಸುವ ಅಧಿಕಾರವು, ಪ್ರಾಮಾಣಿಕವಾಗಿ ಧಾರ್ಮಿಕ ಆಚರಣೆಗಳಿಗಾಗಿ ಉಪಯೋಗಿಸಿದ ಪುರಾತನ ವಸ್ತು ಅಥವಾ ಕಲಾನಿಧಿಯಾಗಿರುವ ಯಾವುದೇ ಪದಾರ್ಥಕ್ಕೆ ವ್ಯಾಪ್ತವಾಗತಕ್ಕದ್ದಲ್ಲ.

**ವಿವರಣೆ:–** ಈ ಪ್ರಕರಣದಲ್ಲಿ "ಸಾರ್ವಜನಿಕ ಸ್ಥಳ" ಎಂದರೆ, ಫೀಜುಗಳ ಸಂದಾಯದ ಮೇಲಾಗಲಿ ಅಥವಾ ಅದಿಲ್ಲದೆಯೇ ಆಗಲಿ ಅಥವಾ ಆ ಸ್ಥಳವು ವಾಸ್ತವವಾಗಿ ಸಾರ್ವಜನಿಕರ ಉಪಯೋಗದಲ್ಲಿರಲಿ ಅಥವಾ ಇಲ್ಲದೇ ಇರಲಿ, ಸಾರ್ವಜನಿಕರ ಉಪಯೋಗಕ್ಕೆ ಮುಕ್ತವಾಗಿರುವಂಥ ಯಾವುದೇ ಸ್ಥಳ.

**20. 19ನೇ ಪ್ರಕರಣದ ಮೇರೆಗೆ ಕಡ್ಡಾಯವಾಗಿ ಆರ್ಜಿಸಿದ ಪುರಾತನ ವಸ್ತು ಮತ್ತು ಕಲಾನಿಧಿಗಳಿಗಾಗಿ ನಷ್ಟ ಪರಿಹಾರದ ಸಂದಾಯ.–** (1) 19ನೇ ಪ್ರಕರಣದ ಮೇರೆಗೆ, ಯಾವುದೇ ಪುರಾತನ ವಸ್ತು ಅಥವಾ ಕಲಾನಿಧಿಯನ್ನು ಕಡ್ಡಾಯವಾಗಿ ಆರ್ಜಿಸಿರುವಲ್ಲಿ, ಇಲ್ಲಿ ಇನ್ನು ಮುಂದೆ ನಿರೂಪಿಸಿರುವ ರೀತಿಯಲ್ಲಿ ಮತ್ತು ತತ್ವಗಳಿಗೆ ಅನುಸಾರವಾಗಿ ನಿರ್ಧರಿಸತಕ್ಕಂಥ ಮೊಬಲಗನ್ನು ನಷ್ಟ ಪರಿಹಾರವಾಗಿ ಸಂದಾಯ ಮಾಡತಕ್ಕದ್ದು, ಎಂದರೆ:–

(ಎ) ನಷ್ಟ ಪರಿಹಾರದ ಮೊಬಲಗನ್ನು ಒಪ್ಪಂದದ ಮೂಲಕ ನಿಗದಿಪಡಿಸಲು ಸಾಧವಿರುವಲ್ಲಿ, ಅದನ್ನು ಅಂಥ ಒಪ್ಪಂದಕ್ಕೆ ಅನುಸಾರವಾಗಿ ಸಂದಾಯ ಮಾಡತಕ್ಕದ್ದು;

(ಬಿ) ಅಂಥ ಯಾವುದೇ ಒಪ್ಪಂದವನ್ನು ಮಾಡಿಕೊಳ್ಳಲು ಆಗದಿರುವಲ್ಲಿ, ಕೇಂದ್ರ ಸರ್ಕಾರವು, ಉಚ್ಚ ನ್ಯಾಯಾಲಯದ ನ್ಯಾಯಾಧೀಶನಾಗಿರುವ ಅಥವಾ ಆಗಿದ್ದ ಅಥವಾ ಉಚ್ಚ ನ್ಯಾಯಾಲಯದ ನ್ಯಾಯಾಧೀಶನಾಗಿ ನೇಮಕಗೊಳ್ಳಲು ಅರ್ಹನಾಗಿರುವ ವ್ಯಕ್ತಿಯನ್ನು ಮಧ್ಯಸ್ಥಗಾರನೆಂದು ನೇಮಕ ಮಾಡತಕ್ಕದ್ದು.

(ಸಿ) ಕೇಂದ್ರ ಸರ್ಕಾರವು, ಯಾವುದೇ ನಿರ್ದಿಷ್ಟ ಪ್ರಕರಣದಲ್ಲಿ ಕಡ್ಡಾಯವಾಗಿ ಆರ್ಜಿಸಿದ ಪುರಾತನ ವಸ್ತು ಅಥವಾ ಕಲಾನಿಧಿಯ ಸ್ವರೂಪದ ಬಗ್ಗೆ ಮಧ್ಯಸ್ಥಗಾರನಿಗೆ ಸಹಾಯ ಮಾಡಲು ತಜ್ಞಜ್ಞಾನವುಳ್ಳ ಒಬ್ಬ ವ್ಯಕ್ತಿಯನ್ನು ನಾಮನಿರ್ದೇಶನ ಮಾಡಬಹುದು ಮತ್ತು ಅಂಥ ನಾಮನಿರ್ದೇಶನವನ್ನು ಮಾಡಿರುವಲ್ಲಿ, ನಷ್ಟ ಪರಿಹಾರವನ್ನು ಪಡೆಯಬೇಕಾಗಿರುವ ವ್ಯಕ್ತಿಯೂ ಸಹ, ಅದೇ ಉದ್ದೇಶಕ್ಕಾಗಿ ಅಸೆಸರನನ್ನು ನಾಮನಿರ್ದೇಶನ ಮಾಡಬಹುದು;

(ಡಿ) ಮಧ್ಯಸ್ಥಗಾರನು ಮುಂದೆ ವ್ಯವಹರಣೆಗಳ ಪ್ರಾರಂಭದಲ್ಲಿ ಕೇಂದ್ರ ಸರ್ಕಾರ ಮತ್ತು ನಷ್ಟ ಪರಿಹಾರವನ್ನು ಪಡೆಯಬೇಕಾಗಿರುವ ವ್ಯಕ್ತಿಯು, ಅನುಕ್ರಮವಾಗಿ ಅವರ ಅಭಿಪ್ರಾಯದಲ್ಲಿ ಯಾವುದು ನಷ್ಟ ಪರಿಹಾರದ ನ್ಯಾಯಯುತ ಮೊಬಲಗು ಆಗಿರುವುದೋ ಅದನ್ನು ತಿಳಿಸತಕ್ಕದ್ದು;

(ಇ) ಮಧ್ಯಸ್ಥಗಾರನು ವಿವಾದವನ್ನು ಸುನಾವಣೆ ಮಾಡಿದ ತರುವಾಯ ಅವನಿಗೆ ನ್ಯಾಯ ಸಮ್ಮತವಾಗಿರುವುದಾಗಿ ಕಂಡು ಬರುವಂಥ ನಷ್ಟ ಪರಿಹಾರದ ಮೊಬಲಗನ್ನು ನಿರ್ಧರಿಸಿ ಮತ್ತು ಅಂಥ ನಷ್ಟ ಪರಿಹಾರವನ್ನು ಯಾರಿಗೆ ಸಂದಾಯ ಮಾಡತಕ್ಕದೋ ಅಂಥ ವ್ಯಕ್ತಿ ಅಥವಾ ವ್ಯಕ್ತಿಗಳನ್ನು ನಿರ್ದಿಷ್ಟಪಡಿಸಿ ಐತೀರ್ಪನ್ನು ಕೊಡತಕ್ಕದ್ದು ಮತ್ತು ಆ ಐತೀರ್ಪನ್ನು ಕೊಡುವಲ್ಲಿ, ಅವನು, ಪ್ರಕರಣದ ಪ್ರತಿಯೊಂದು ಸಂದರ್ಭಗಳು ಮತ್ತು (2)ನೇ ಉಪ ಪ್ರಕರಣದ ಉಪಬಂಧಗಳನ್ನು ಗಮನದಲ್ಲಿಟ್ಟುಕೊಳ್ಳತಕ್ಕದ್ದು;

(ಎಫ್) ಆ ನಷ್ಟಪರಿಹಾರಕ್ಕೆ ಹಕ್ಕುಳವರಾಗಿರುವ ವ್ಯಕ್ತಿ ಅಥವಾ ವ್ಯಕ್ತಿಗಳ ಬಗ್ಗೆ ಯಾವುದೇ ವಿವಾದವಿರುವಲ್ಲಿ, ಮಧ್ಯಸ್ಥಗಾರನು, ಅಂಥ ವಿವಾದವನ್ನು ತೀರ್ಮಾನಿಸತಕ್ಕದ್ದು, ಮತ್ತು ನಷ್ಟ ಪರಿಹಾರಕ್ಕೆ ಒಬ್ಬರಿಗಿಂತ ಹೆಚ್ಚು ವ್ಯಕ್ತಿಗಳು ಹಕ್ಕುಳ್ಳವರಾಗಿದ್ದಾರೆಂದು ಮಧ್ಯಸ್ಥಗಾರನು ನಿರ್ಧರಿಸಿದರೆ, ಅವನು ಅದರ ಮೊಬಲಗನ್ನು ಅಂಥ ವ್ಯಕ್ತಿಗಳ ನಡುವೆ ಹಂಚತಕ್ಕದ್ದು;

(ಜಿ) ಮಧ್ಯಸ್ಥಗಾರಿಕೆ ಅಧಿನಿಯಮ, 1940 (1940ರ 10) ರಲ್ಲಿರುವುದು ಯಾವುದೂ, ಈ ಪ್ರಕರಣದ ಮೇರೆಗಿನ ಮಧ್ಯಸ್ಥಿಕೆಗೆ ಅನ್ವಯವಾಗತಕ್ಕದ್ದಲ್ಲ.

(2) (1)ನೇ ಉಪಪ್ರಕರಣದ ಮೇರೆಗೆ, ನಷ್ಟ ಪರಿಹಾರವನ್ನು ನಿರ್ಧರಿಸುವಾಗ, ಮಧ್ಯಸ್ಥಗಾರನು, ಈ ಕೆಳಕಂಡ ಅಂಶಗಳನ್ನು ಗಮನದಲ್ಲಿಟ್ಟುಕೊಳ್ಳತಕ್ಕದ್ದು, ಎಂದರೆ:–

(i) ಯಾವ ದಿನಾಂಕ ಅಥವಾ ಕಾಲಮಾನಕ್ಕೆ ಆ ಪುರಾತನ ವಸ್ತು ಅಥವಾ ಕಲಾನಿಧಿಯು ಸೇರಿರುವುದೋ ಆ ದಿನಾಂಕ ಅಥವಾ ಆ ಕಾಲಮಾನ;

(ii) ಪುರಾತನ ವಸ್ತು ಅಥವಾ ಕಲಾನಿಧಿಯ ಕಲಾತ್ಮಕತೆ, ಸೌಂದರ್ಯ, ಐತಿಹಾಸಿಕ, ವಾಸ್ತುಶಿಲ್ಪ, ಪುರಾತತ್ವ ಶಾಸ್ತ್ರ ಅಥವಾ ಮಾನವ ಶಾಸ್ತ್ರೀಯ ಮಹತ್ವ;

(iii) ಆ ಪುರಾತನ ವಸ್ತು ಅಥವಾ ಕಲಾನಿಧಿಯ ಅಪೂರ್ವತೆ;

(iv) ವಿವಾದಕ್ಕೆ ಸಂಬಂಧಪಟ್ಟಿರುವಂಥ ಇತರ ವಿಷಯಗಳು.

(3) (1)ನೇ ಉಪಪ್ರಕರಣದ ಮೇರೆಗೆ ನೇಮಕಗೊಂಡ ಮಧ್ಯಸ್ಥಗಾರನು ಆ ಪ್ರಕರಣದ ಮೇರೆಗೆ ಮಧ್ಯಸ್ಥಗಾರಿಕೆ ವ್ಯವಹರಣೆಗಳನ್ನು ನಡೆಸುವಾಗ, ಈ ಕೆಳಕಂಡ ವಿಷಯಗಳಿಗೆ ಸಂಬಂಧಿಸಿದಂತೆ ಸಿವಿಲ್ ಪ್ರಕ್ರಿಯಾ ಸಂಹಿತೆ, 1908 (1908ರ 5)ರ ಮೇರೆಗೆ ಒಂದು ದಾವೆಯ ಅಧಿವಿಚಾರಣೆ ನಡೆಸುವಾಗ ಸಿವಿಲ್ ನ್ಯಾಯಾಲಯವು ಹೊಂದಿರುವ ಎಲ್ಲ ಅಧಿಕಾರಗಳನ್ನು ಹೊಂದಿರತಕ್ಕದ್ದು, ಎಂದರೆ:–

(ಎ) ಯಾವನೇ ವ್ಯಕ್ತಿಯ ಹಾಜರಾತಿಯನ್ನು ಒತ್ತಾಯಿಸುವುದು ಮತ್ತು ಅವನನ್ನು ಪ್ರಮಾಣದ ಮೇಲೆ ಪರೀಕ್ಷಿಸುವುದು;

(ಬಿ) ಯಾವುದೇ ದಸ್ತಾವೇಜನ್ನು ಕಂಡು ಹಿಡಿಯುವುದು ಮತ್ತು ಅದನ್ನು ಹಾಜರುಪಡಿಸುವುದನ್ನು ಅಗತ್ಯಪಡಿಸುವುದು;

(ಸಿ) ಶಪಥ ಪತ್ರಗಳ ಮೇಲೆ ಸಾಕ್ಷ್ಯವನ್ನು ಸ್ವೀಕರಿಸುವುದು.

(ಡಿ) ಯಾವುದೇ ನ್ಯಾಯಾಲಯ ಅಥವಾ ಕಚೇರಿಯಿಂದ ಯಾವುದೇ ಸಾರ್ವಜನಿಕ ದಾಖಲೆಯನ್ನು ಕಡ್ಡಾಯವಾಗಿ ಕೋರುವುದು; ಮತ್ತು

(ಇ) ಸಾಕ್ಷಿದಾರರ ಪರೀಕ್ಷೆಗಾಗಿ ಕಮೀಷನ್ ಗಳನ್ನು ಹೊರಡಿಸುವುದು.

**21. ಲೈಸೆನ್ಸು ಕೊಡುವ ಅಧಿಕಾರಿಗಳ ಮತ್ತು ನೋಂದಣಿ ಅಧಿಕಾರಿಗಳ ತೀರ್ಮಾನಗಳ ವಿರುದ್ಧ ಅಪೀಲುಗಳು.–** **(1)** 8ನೇ ಪ್ರಕರಣದ ಅಥವಾ 9ನೇ ಪ್ರಕರಣ ಅಥವಾ 11ನೇ ಪ್ರಕರಣದ ಮೇರೆಗೆ ಲೈಸೆನ್ಸು ಕೊಡುವ ಅಧಿಕಾರಿಗಳ ತೀರ್ಮಾನದಿಂದ ಅಥವಾ 16ನೇ ಪ್ರಕರಣದ ಮೇರೆಗೆ ನೋಂದಣಿ ಅಧಿಕಾರಿಯ ತೀರ್ಮಾನದಿಂದ ಬಾಧಿತನಾದ ಯಾವನೇ ವ್ಯಕ್ತಿಯು, ಅವನಿಗೆ ಆ ತೀರ್ಮಾನವನ್ನು ತಿಳಿಸಿದ ದಿನಾಂಕದಿಂದ ಮೂವತ್ತು ದಿವಸಗಳೊಳಗೆ ನಿಯಮಿಸಬಹುದಾದಂಥ ಪ್ರಾಧಿಕಾರಕ್ಕೆ ಅಪೀಲನ್ನು ಹೂಡಬಹುದು:

ಪರಂತು, ಅಪೀಲನ್ನು ಸಕಾಲದಲ್ಲಿ ಸಲ್ಲಿಸಲು ಅಪೀಲುದಾರನಿಗೆ ಸಾಕಷ್ಟು ಕಾರಣಗಳಿಂದ ಅಡ್ಡಿಯುಂಟಾಗಿತ್ತೆಂದು ಅಪೀಲು ಪ್ರಾಧಿಕಾರಕ್ಕೆ ಮನದಟ್ಟಾದರೆ, ಅದು ಸದರಿ ಮೂವತ್ತು ದಿವಸಗಳ ಅವಧಿಯು ಮುಕ್ತಾಯವಾದ ತರುವಾಯ ಅಪೀಲನ್ನು ಪುರಸ್ಕರಿಸಬಹುದು.

(2) (1)ನೇ ಉಪಪ್ರಕರಣದ ಮೇರೆಗೆ ಅಪೀಲನ್ನು ಸ್ವೀಕರಿಸಿದ ಮೇಲೆ, ಅಪೀಲು ಪ್ರಾಧಿಕಾರವು ಅಪೀಲುದಾರನಿಗೆ ಅಹವಾಲನ್ನು ಹೇಳಿಕೊಳ್ಳಲು ಅವಕಾಶವನ್ನು ಕೊಟ್ಟ ತರುವಾಯ, ಅದು ಸೂಕ್ತವೆಂದು ಭಾವಿಸುವಂಥ ಆದೇಶಗಳನ್ನು ಮಾಡತಕ್ಕದ್ದು.

**22. ಮಧ್ಯಸ್ಥಗಾರರ ಐತೀರ್ಪುಗಳ ವಿರುದ್ಧ ಅಪೀಲುಗಳು.–** 20ನೇ ಪ್ರಕರಣದ ಮೇರೆಗೆ ಮಾಡಿದ ಮಧ್ಯಸ್ಥನ ಐತೀರ್ಪಿನ ಮೂಲಕ ಬಾಧಿತನಾದ ಯಾವನೇ ವ್ಯಕ್ತಿಯು, ಅವನಿಗೆ ಐತೀರ್ಪನ್ನು ತಿಳಿಸಿದ ದಿನಾಂಕದಿಂದ ಮೂವತ್ತು ದಿವಸಗಳೊಳಗೆ, ಅವನು ಯಾವ ಉಚ್ಚ ನ್ಯಾಯಾಲಯದ ಅಧಿಕಾರ ವ್ಯಾಪ್ತಿಯೊಳಗೆ ವಾಸಿಸುತ್ತಿರುವನೋ ಆ ಉಚ್ಚ ನ್ಯಾಯಾಲಯಕ್ಕೆ ಅಪೀಲನ್ನು ಹೂಡಬಹುದು:

ಪರಂತು, ಆ ಅಪೀಲನ್ನು ಸಕಾಲದಲ್ಲಿ ಸಲ್ಲಿಸಲು ಅಪೀಲುದಾರನಿಗೆ ಸಾಕಷ್ಟು ಕಾರಣಗಳಿಂದ ಅಡ್ಡಿಯುಂಟಾಗಿತ್ತೆಂದು ಆ ಉಚ್ಚ ನ್ಯಾಯಾಲಯಕ್ಕೆ ಮನದಟ್ಟಾದರೆ, ಅದು ಸದರಿ ಮೂವತ್ತು ದಿವಸಗಳ ಅವಧಿಯು ಮುಕ್ತಾಯವಾದ ತರುವಾಯವೂ ಅಪೀಲನ್ನು ಪುರಸ್ಕರಿಸಬಹುದು.

**23. ಪ್ರವೇಶ, ಶೋಧನೆ, ಅಭಿಗ್ರಹಣೆ ಮುಂತಾದವುಗಳ ಬಗ್ಗೆ ಅಧಿಕಾರ.–** (1) ಈ ಬಗ್ಗೆ ಕೇಂದ್ರ ಸರ್ಕಾರವು ಅಧಿಕೃತಗೊಳಿಸಿದ ಸರ್ಕಾರದ ಅಧಿಕಾರಿಯಾಗಿರುವ ಯಾವನೇ ವ್ಯಕ್ತಿಯು, ಈ ಅಧಿನಿಯಮದ ಉಪಬಂಧಗಳ ಪಾಲನೆಯನ್ನು ಖಚಿತಪಡಿಸಿಕೊಳ್ಳುವ ಅಥವಾ ಈ ಅಧಿನಿಯಮದ ಉಪಬಂಧಗಳನ್ನು ಪಾಲಿಸಲಾಗಿದೆ ಎಂಬುದನ್ನು ಮನದಟ್ಟು ಮಾಡಿಕೊಳ್ಳುವ ದೃಷ್ಟಿಯಿಂದ,–

(i) ಯಾವುದೇ ಸ್ಥಳವನ್ನು ಪ್ರವೇಶಿಸಬಹುದು ಮತ್ತು ಶೋಧಿಸಬಹುದು;

(ii) ಯಾವ ಪುರಾತನ ವಸ್ತು ಅಥವಾ ಕಲಾನಿಧಿಗೆ ಸಂಬಂಧಿಸಿ ಈ ಅಧಿನಿಯಮದ ಯಾವುದೇ ಉಪಬಂಧವನ್ನು ಉಲ್ಲಂಘಿಸಲಾಗಿದೆ, ಉಲ್ಲಂಘಿಸಲಾಗುತ್ತಿದೆ ಅಥವಾ ಇನ್ನೇನು ಉಲ್ಲಂಘಿಸಬಹುದಾಗಿದೆ ಎಂದು ಶಂಕಿಸುವನೋ ಆ ಯಾವುದೇ ಪುರಾತನ ವಸ್ತು ಅಥವಾ ಕಲಾನಿಧಿಯನ್ನು ಅಭಿಗ್ರಹಿಸಬಹುದು ಮತ್ತು ತರುವಾಯ, ಹಾಗೆ ಅಭಿಗ್ರಹಿಸಿದ ಪುರಾತನ ವಸ್ತು ಅಥವಾ ಕಲಾನಿಧಿಯನ್ನು ನ್ಯಾಯಾಲಯದಲ್ಲಿ ಹಾಜರುಪಡಿಸುವುದನ್ನು ಖಚಿತಪಡಿಸಿಕೊಳ್ಳುವುದಕ್ಕಾಗಿ ಮತ್ತು ಹಾಗೆ ಹಾಜರುಪಡಿಸುವವರೆಗೆ ಅದರ ಸುರಕ್ಷಿತ ಅಭಿರಕ್ಷೆಗಾಗಿ ಎಲ್ಲಾ ಅವಶ್ಯ ಕ್ರಮಗಳನ್ನು ಕೈಗೊಳ್ಳಬಹುದು.

(2) ಶೋಧನೆ ಮತ್ತು ಅಭಿಗ್ರಹಣಕ್ಕೆ ಸಂಬಂಧಪಟ್ಟ ದಂಡ ಪ್ರಕ್ರಿಯಾ ಸಂಹಿತೆ, 1898ರ (1898ರ 5) 102 ಮತ್ತು 103ನೇ ಪ್ರಕರಣದ ಉಪಬಂಧಗಳು ಸಾಧ್ಯವಾಗಬಹುದಾದಷ್ಟರ ಮಟ್ಟಿಗೆ ಈ ಪ್ರಕರಣದ ಮೇರೆಗೆ ಮಾಡಿದ ಶೋಧನೆಗಳಿಗೆ ಮತ್ತು ಅಭಿಗ್ರಹಣಗಳಿಗೆ ಅನ್ವಯವಾಗತಕ್ಕದ್ದು.

**24. ಒಂದು ವಸ್ತು ಪುರಾತನ ವಸ್ತು ಅಥವಾ ಕಲಾನಿಧಿಯೇ ಅಥವಾ ಅಲ್ಲವೇ ಎಂಬುದನ್ನು ನಿರ್ಧರಿಸಲು ಅಧಿಕಾರ.–** ಈ ಅಧಿನಿಯಮದ ಉದ್ದೇಶಗಳಿಗಾಗಿ ಯಾವುದೇ ವಸ್ತು, ಪದಾರ್ಥ ಅಥವಾ ಸಾಮಗ್ರಿ ಅಥವಾ ಹಸ್ತ ಪ್ರತಿ, ದಾಖಲೆ ಅಥವಾ ಇತರ ದಸ್ತಾವೇಜು, ಪುರಾತನ ವಸ್ತುವೇ ಅಥವಾ ಅಲ್ಲವೇ ಅಥವಾ ಕಲಾನಿಧಿಯೇ ಅಥವಾ ಅಲ್ಲವೇ ಹೇಗೆ ಎಂಬ ಬಗ್ಗೆ ಯಾವುದೇ ಪ್ರಶ್ನೆಯು ಉದ್ಭವಿಸಿದರೆ ಅದನ್ನು ಭಾರತ ಪುರಾತತ್ವ ಸಮೀಕ್ಷೆಯ ಮಹಾನಿರ್ದೇಶಕನಿಗೆ ಅಥವಾ ಭಾರತ ಪುರಾತತ್ವ ಸಮೀಕ್ಷೆಯ ಮಹಾನಿದೇಶಕರು ಅಧಿಕೃತಗೊಳಿಸಿದ, ಭಾರತ ಪುರಾತತ್ವ ಸಮೀಕ್ಷೆಯ ನಿರ್ದೇಶಕನ ದರ್ಜೆಗೆ ಕಡಿಮೆಯಿಲ್ಲದ ಅಧಿಕಾರಿಗೆ ಒಪ್ಪಿಸತಕ್ಕದ್ದು ಮತ್ತು ಅಂಥ ಪ್ರಶ್ನೆಯ ಬಗ್ಗೆ ಸಂದರ್ಭಾನುಸಾರ, ಭಾರತ ಪುರಾತತ್ವ ಸಮೀಕ್ಷೆಯ ಮಹಾ ನಿರ್ದೇಶಕ ಅಥವಾ ಅಂಥ ಅಧಿಕಾರಿಯ ತೀರ್ಮಾನವು ಅಂತಿಮವಾಗಿರತಕ್ಕದ್ದು.

**25. ದಂಡ.–** (1) ಯಾವನೇ ವ್ಯಕ್ತಿಯು ತಾನಾಗಿಯೇ ಆಗಲಿ ಅಥವಾ ತನ್ನ ಪರವಾಗಿ ಯಾವನೇ ವ್ಯಕ್ತಿಯ ಮೂಲಕವೇ ಆಗಲಿ 3ನೇ ಪ್ರಕರಣವನ್ನು ಉಲ್ಲಂಘಿಸಿ, ಯಾವುದೇ ಪುರಾತನ ವಸ್ತು ಅಥವಾ ಕಲಾನಿಧಿಯನ್ನು ರಫ್ತು ಮಾಡಿದರೆ ಅಥವಾ ರಫ್ತು ಮಾಡಲು ಪ್ರಯತ್ನಿಸಿದರೆ ಅವನು, 4ನೇ ಪ್ರಕರಣದ ಮೂಲಕ ಅನ್ವಯಿಸಲಾದಂತೆ ಸೀಮಾ ಸುಂಕ ಅಧಿನಿಯಮ, 1962 (1962 ರ 5)ರ ಉಪಬಂಧಗಳ ಮೇರೆಗೆ ಅವನು ಗುರಿಯಾಗಬಹುದಾದಂಥ ಯಾವುದೇ ಅಧಿಹರಣಕ್ಕೆ ಅಥವಾ ದಂಡಕ್ಕೆ ಬಾಧಕವಾಗದಂತೆ, ಆರು ತಿಂಗಳಿಗೆ ಕಡಿಮೆಯಿಲ್ಲದ ಆದರೆ ಮೂರು ವರ್ಷಗಳವರೆಗೆ ವಿಸ್ತರಿಸಬಹುದಾದಂಥ ಅವಧಿಯ ಕಾರಾವಾಸದಿಂದ ಮತ್ತು ಜುಲ್ಮಾನೆಯಿಂದ ದಂಡನೀಯ ನಾಗತಕ್ಕದ್ದು.

(2) ಯಾವನೇ ವ್ಯಕ್ತಿಯು, 5ನೇ ಪ್ರಕರಣದ ಅಥವಾ 12ನೇ ಪ್ರಕರಣದ ಅಥವಾ 13ನೇ ಪ್ರಕರಣದ (2)ನೇ ಉಪಪ್ರಕರಣ ಅಥವಾ (3)ನೇ ಉಪಪ್ರಕರಣ ಅಥವಾ 14ನೇ ಪ್ರಕರಣದ ಅಥವಾ 17ನೇ ಪ್ರಕರಣದ ಉಪಬಂಧಗಳನ್ನು ಉಲ್ಲಂಘಿಸಿದರೆ, ಅವನು, ಆರು ತಿಂಗಳವರೆಗೆ ವಿಸ್ತರಿಸಬಹುದಾದಂಥ ಅವಧಿಯ ಕಾರಾವಾಸದಿಂದ ಅಥವಾ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡನೀಯನಾಗತಕ್ಕದ್ದು, ಮತ್ತು ಯಾವ ಪುರಾತನ ವಸ್ತುವಿಗೆ ಸಂಬಂಧಿಸಿ ಆ ಅಪರಾಧವನ್ನು ಮಾಡಲಾಗಿದೆಯೋ ಆ ಪುರಾತನ ವಸ್ತುವು, ಸರ್ಕಾರವು ವಶಪಡಿಸಿಕೊಳ್ಳುವುದುಕ್ಕೆ ಗುರಿಯಾಗತಕ್ಕದ್ದು.

(3) ಯಾವನೇ ವ್ಯಕ್ತಿಯು, 10ನೇ ಪ್ರಕರಣದ ಮೇರೆಗೆ ಇಟ್ಟುಕೊಂಡು ಬಂದ ಯಾವುದೇ, ಛಾಯಾಚಿತ್ರ ಅಥವಾ ರಿಜಿಸ್ಟರನ್ನು ಯಾವನೇ ಲೈಸೆನ್ಸು ಕೊಡುವ ಅಧಿಕಾರಿಯು ಪರಿಶೀಲಿಸುವುದನ್ನು ತಡೆಗಟ್ಟಿದರೆ ಅಥವಾ 23ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ಕೇಂದ್ರ ಸರ್ಕಾರವು ಅಧಿಕೃತಗೊಳಿಸಿದ ಯಾವನೇ ಅಧಿಕಾರಿಯು, ಈ ಉಪ ಪ್ರಕರಣದ ಮೇರೆಗೆ ಯಾವುದೇ ಸ್ಥಳವನ್ನು ಪ್ರವೇಶಿಸುವುದನ್ನು ಅಥವಾ ಅದನ್ನು ಶೋಧಿಸುವುದನ್ನು ತಡೆಗಟ್ಟಿದರೆ, ಅವನು, ಆರು ತಿಂಗಳವರೆಗೆ ವಿಸ್ತರಿಸಬಹುದಾದಂಥ ಅವಧಿಯ ಕಾರಾವಾಸದಿಂದ ಅಥವಾ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡನೀಯನಾಗತಕ್ಕದ್ದು.

**26. ಅಪರಾಧಗಳ ಸಂಜ್ಞೇಯತೆ.–** (1) 25ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗಿನ ಅಪರಾಧಕ್ಕಾಗಿ ಯಾವುದೇ ಪ್ರಾಸಿಕ್ಯೂಷನನ್ನು, ಈ ಬಗ್ಗೆ ನಿಯಮಿಸಬಹುದಾದಂಥ ಸರ್ಕಾರದ ಅಧಿಕಾರಿಯು ಅಥವಾ ಅವನ ಮಂಜೂರಾತಿಯಿಂದಲ್ಲದೆ ಹೂಡತಕ್ಕದ್ದಲ್ಲ.

(2) ಯಾವುದೇ ನ್ಯಾಯಾಲಯವು 25ನೇ ಪ್ರಕರಣದ (2)ನೇ ಉಪಪ್ರಕರಣ ಅಥವಾ (3)ನೇ ಉಪಪ್ರಕರಣದ ಮೇರೆಗೆ ದಂಡನೀಯವಾದ ಅಪರಾಧವನ್ನು ಕೇಂದ್ರ ಸರ್ಕಾರವು ಈ ಬಗ್ಗೆ ಸಾಮಾನ್ಯವಾಗಿ ಅಥವಾ ವಿಶೇಷವಾಗಿ ಅಧಿಕೃತಗೊಳಿಸಿದ ಅಧಿಕಾರಿಯು ಬರಹದಲ್ಲಿ ಮಾಡಿಕೊಂಡ ದೂರಿನ ಮೇಲಲ್ಲದೆ ಸಂಜ್ಞಾನಕ್ಕೆ ತೆಗೆದುಕೊಳ್ಳತಕ್ಕದ್ದಲ್ಲ.

(3) ಪ್ರೆಸಿಡೆನ್ಸಿ ಮ್ಯಾಜಿಸ್ಟ್ರೇಟ್ ಅಥವಾ ಮೊದಲನೇ ದರ್ಜೆಯ ಮ್ಯಾಜಿಸ್ಟ್ರೇಟನಿಗಿಂತ ಕಡಿಮೆ ದರ್ಜೆಯ ಯಾವುದೇ ನ್ಯಾಯಾಲಯವು ಈ ಅಧಿನಿಯಮದ ಮೇರೆಗೆ ದಂಡನೀಯವಾದ ಯಾವುದೇ ಅಪರಾಧವನ್ನು ಅಧಿವಿಚಾರಣೆ ಮಾಡತಕ್ಕದ್ದಲ್ಲ.

**27. ಹೆಚ್ಚಿಸಲಾದ ದಂಡಗಳನ್ನು ವಿಧಿಸಲು ಮ್ಯಾಜಿಸ್ಟ್ರೇಟನ ಅಧಿಕಾರ.–** ದಂಡ ಪ್ರಕ್ರಿಯಾ ಸಂಹಿತೆ, 1898 (1898ರ 5)ರ 32ನೇ ಪ್ರಕರಣದಲ್ಲಿ ಏನೇ ಅಡಕವಾಗಿದ್ದಾಗ್ಯೂ, ಯಾವನೇ ಪ್ರೆಸಿಡೆನ್ಸಿ ಮ್ಯಾಜಿಸ್ಟ್ರೇಟ್ ಅಥವಾ ಮೊದಲನೇ ದರ್ಜೆಯ ಯಾವನೇ ಮ್ಯಾಜಿಸ್ಟ್ರೇಟನಿಗೆ, ಸದರಿ ಸಂಹಿತೆಯ 32ನೇ ಪ್ರಕರಣದ ಮೇರೆಗಿನ ಅವನ ಅಧಿಕಾರಕ್ಕಿಂತ ಹೆಚ್ಚಾಗಿ ಈ ಅಧಿನಿಯಮದ ಮೇರೆಗೆ ಯಾವುದೇ ಶಿಕ್ಷೆಯನ್ನು ಕೊಡುವುದು ಕಾನೂನು ಸಮ್ಮತವಾಗಿರತಕ್ಕದ್ದು.

**28. ಕಂಪನಿಗಳಿಂದ ಅಪರಾಧಗಳು.–** (1) ಈ ಅಧಿನಿಯಮದ ಮೇರೆಗಿನ ಒಂದು ಅಪರಾಧವನ್ನು ಕಂಪನಿಯು ಮಾಡಿರುವಲ್ಲಿ, ಆ ಅಪರಾಧವನ್ನು ಮಾಡಿದ ಕಾಲದಲ್ಲಿ ಆ ಕಂಪನಿಯ ವ್ಯವಹಾರವನ್ನು ನಡೆಸುವುದಕ್ಕಾಗಿ ಆ ಕಂಪನಿಯ ಪ್ರಭಾರದಲ್ಲಿದ್ದ ಅಥವಾ ಅದಕ್ಕೆ ಜವಾಬ್ದಾರನಾಗಿದ್ದ ಪ್ರತಿಯೊಬ್ಬ ವ್ಯಕ್ತಿ ಮತ್ತು ಆ ಕಂಪನಿಯು ಸಹ ಆ ಅಪರಾಧದ ಬಗ್ಗೆ ತಪ್ಪಿತಸ್ಥರಾಗಿರುವುದಾಗಿ ಭಾವಿಸತಕ್ಕದ್ದು ಮತ್ತು ಅವರು ತಮ್ಮ ವಿರುದ್ಧದ ವ್ಯವಹರಣೆಗೆ ಗುರಿಯಾಗತಕ್ಕದ್ದು ಮತ್ತು ತದನುಸಾರವಾಗಿ ದಂಡಿತರಾಗತಕ್ಕದ್ದು:

ಪರಂತು, ಈ ಉಪಪ್ರಕರಣದಲ್ಲಿ ಅಡಕವಾಗಿರುವುದು ಯಾವುದೂ, ಯಾವನೇ ಅಂಥ ವ್ಯಕ್ತಿಯನ್ನು, ಆ ಅಪರಾಧವು ಅವನಿಗೆ ಗೊತ್ತಿಲ್ಲದೆ ನಡೆಯಿತೆಂದು ಅಥವಾ ಅಂಥ ಅಪರಾಧ ನಡೆಯುವುದನ್ನು ತಡೆಗಟ್ಟಲು ತಾನು ಎಲ್ಲಾ ಯುಕ್ತ ಶ್ರದ್ಧೆಯನ್ನು ವಹಿಸಿದ್ದೆನೆಂದು ಅವನು ರುಜುವಾತುಪಡಿಸಿದರೆ, ಅವನನ್ನು ಈ ಅಧಿನಿಯಮದ ಮೇರೆಗಿನ ಯಾವುದೇ ದಂಡನೆಗೆ ಗುರಿಪಡಿಸತಕ್ಕದ್ದಲ್ಲ.

(2) (1)ನೇ ಉಪಪ್ರಕರಣದಲ್ಲಿ ಏನೇ ಅಡಕವಾಗಿದ್ದಾಗ್ಯೂ, ಈ ಅಧಿನಿಯಮದ ಮೇರೆಗಿನ ಅಪರಾಧವನ್ನು ಆ ಕಂಪನಿಯ ಯಾವನೇ ನಿರ್ದೇಶಕ, ವ್ಯವಸ್ಥಾಪಕ, ಕಾರ್ಯದರ್ಶಿ ಅಥವಾ ಇತರ ಅಧಿಕಾರಿಯ ಸಮ್ಮತಿ ಅಥವಾ ಪರೋಕ್ಷ ಸಮ್ಮತಿ ಅಥವಾ ಅವನ ಯಾವುದೇ ನಿರ್ಲಕ್ಷ್ಯತೆಯ ಕಾರಣದಿಂದ ಮಾಡಲಾಗಿರುವಲ್ಲಿ, ಅಂಥ ನಿರ್ದೇಶಕ, ವ್ಯವಸ್ಥಾಪಕ, ಕಾರ್ಯದರ್ಶಿ ಅಥವಾ ಇತರ ಅಧಿಕಾರಿಯನ್ನು ಸಹ, ಆ ಅಪರಾಧದ ಬಗ್ಗೆ ತಪ್ಪಿತಸ್ಥರಾಗಿರುವುದಾಗಿ ಭಾವಿಸಕತಕ್ಕದ್ದು ಮತ್ತು ಅವರು ತಮ್ಮ ವಿರುದ್ಧದ ವ್ಯವಹರಣೆಗೆ ಗುರಿಯಾಗತಕ್ಕದ್ದು ಮತ್ತು ತದನುಸಾರವಾಗಿ ದಂಡಿತರಾಗತಕ್ಕದ್ದು.

**ವಿವರಣೆ:–** ಈ ಪ್ರಕರಣದ ಉದ್ದೇಶಕ್ಕಾಗಿ,–

(ಎ) "ಕಂಪನಿ" ಎಂದರೆ ಯಾವುದೇ ನಿಗಮಿತ ನಿಕಾಯ ಮತ್ತು ಫರ್ಮು ಅಥವಾ ವ್ಯಕ್ತಿಗಳ ಇತರ ಸಂಘವನ್ನು ಅದು ಒಳಗೊಳ್ಳುತ್ತದೆ; ಮತ್ತು

(ಬಿ) ಫರ್ಮಿಗೆ ಸಂಬಂಧಪಟ್ಟಂತೆ "ನಿರ್ದೇಶಕ" ಎಂದರೆ ಫರ್ಮ್‌ನ ಪಾಲುಗಾರ.

**29. ಸದ್ಭಾವನೆಯಿಂದ ತೆಗೆದುಕೊಂಡ ಕ್ರಮದ ಬಗ್ಗೆ ಸಂರಕ್ಷಣೆ.–** ಈ ಅಧಿನಿಯಮದ ಮೇರೆಗೆ ಸದ್ಭಾನೆಯಿಂದ ಮಾಡಿದ ಅಥವಾ ಮಾಡಲು ಉದ್ದೇಶಿಸಿರುವಂಥ ಕಾರ್ಯಕ್ಕಾಗಿ ಸರ್ಕಾರ ಅಥವಾ ಸರ್ಕಾರದ ಯಾವನೇ ಅಧಿಕಾರಿಯ ವಿರುದ್ಧ ಯಾವುದೇ ದಾವೆ, ಪ್ರಾಸಿಕ್ಯೂಷನ್ ಅಥವಾ ಇತರ ಕಾನೂನು ವ್ಯವಹರಣೆಯನ್ನು ಹೂಡತಕ್ಕದ್ದಲ್ಲ.

**30. ಇತರ ಕಾನೂನುಗಳ ಅನ್ವಯವು ಪ್ರತಿಷೇಧಿತವಾಗಿಲ್ಲ.–** ಈ ಅಧಿನಿಯಮದ ಉಪಬಂಧಗಳು, ಪ್ರಾಚೀನ ಸ್ಮಾರಕ ಪರಿರಕ್ಷಣೆ ಅಧಿನಿಯಮ, 1904 (1904ರ 7) ಅಥವಾ ಪ್ರಾಚೀನ ಸ್ಮಾರಕ ಮತ್ತು ಪುರಾವಸ್ತು ಸ್ಥಳ ಮತ್ತು ಅವಶೇಷಗಳ ಅಧಿನಿಯಮ, 1958 (1958ರ 24) ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನ ಉಪಬಂಧಗಳ ಜೊತೆಗೆ ಹೆಚ್ಚಿಗೆಯಾಗಿ ಇರತಕ್ಕದ್ದು, ಆದರೆ ಅವುಗಳನ್ನು ಅಲ್ಪೀಕರಿಸಿ ಅಲ್ಲ.

**31. ನಿಯಮ ರಚನಾಧಿಕಾರ.–** (1) ಕೇಂದ್ರ ಸರ್ಕಾರವು, ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ, ಈ ಅಧಿನಿಯಮದ ಉಪಬಂಧಗಳನ್ನು ಜಾರಿಗೊಳಿಸುವ ಉದ್ದೇಶಕ್ಕಾಗಿ ನಿಯಮಗಳನ್ನು ರಚಿಸಬಹುದು.

(2) ವಿಶೇಷವಾಗಿ ಮತ್ತು ಹಿಂದೆ ಹೇಳಿದ ಅಧಿಕಾರದ ಸಾಮಾನ್ಯ ಅನ್ವಯಕ್ಕೆ ಬಾಧಕವಾಗದಂತೆ, ಅಂಥ ನಿಯಮಗಳು,–

(ಎ) 3ನೇ ಪ್ರಕರಣದ (2)ನೇ ಉಪ ಪ್ರಕರಣದ ಮೇರೆಗೆ ಪರ್ಮಿಟ್ಟನ್ನು ಕೊಡುವ ಪ್ರಾಧಿಕಾರ;

(ಬಿ) 7ನೇ ಪ್ರಕರಣದ (1)ನೇ ಉಪ ಪ್ರಕರಣದ ಮೇರೆಗೆ ಲೈಸೆನ್ಸಿನ ಮಂಜೂರಾತಿಗಾಗಿ ಅರ್ಜಿಯನ್ನು ಮಾಡಿಕೊಳ್ಳಬಹುದಾದಂಥ ನಮೂನೆ ಮತ್ತು ಅಂಥ ಅರ್ಜಿಯು ಒಳಗೊಂಡಿರಬೇಕಾದಂಥ ವಿವರಗಳು;

(ಸಿ) 8ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ಲೈಸೆನ್ಸನ್ನು ಮಂಜೂರು ಮಾಡುವಾಗ ಗಮನದಲ್ಲಿಟ್ಟುಕೊಳ್ಳಬಹುದಾದಂಥ ಅಂಶಗಳು;

(ಡಿ) 8ನೇ ಪ್ರಕರಣದ (1)ನೇ ಉಪ ಪ್ರಕರಣದ ಮೇರೆಗೆ, ಲೈಸೆನ್ಸನ್ನು ಯಾವ ಫೀಜುಗಳನ್ನು ಸಂದಾಯ ಮಾಡಿದ ಮೇಲೆ ಯಾವ ಅವಧಿಯವರೆಗೆ, ಯಾವ ಷರತ್ತುಗಳಿಗೆ ಒಳಪಟ್ಟು ಮತ್ತು ಯಾವ ನಮೂನೆಯಲ್ಲಿ ಮಂಜೂರು ಮಾಡಬಹುದೋ, ಆ ಫೀಜುಗಳು, ಆ ಅವಧಿ, ಆ ಷರತ್ತುಗಳು ಮತ್ತು ನಮೂನೆ ಮತ್ತು ಅಂಥ ಲೈಸೆನ್ಸು ಒಳಗೊಳ್ಳಬೇಕಾದಂಥ ವಿವರಗಳು;

(ಇ) 9ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ಯಾವ ಫೀಜುಗಳನ್ನು ಸಂದಾಯ ಮಾಡಿದ ಮೇಲೆ ಮತ್ತು ಯಾವ ಅವಧಿಯವರೆಗೆ ಲೈಸೆನ್ಸನ್ನು ನವೀಕರಿಸಬಹುದೋ ಆ ಫೀಜುಗಳು ಮತ್ತು ಆ ಅವಧಿ;

(ಎಫ್) 10ನೇ ಪ್ರಕರಣದ ಮೇರೆಗೆ ಇಟ್ಟುಕೊಂಡು ಬರಬೇಕಾದ ದಾಖಲೆಗಳು, ಛಾಯಾಚಿತ್ರಗಳು ಮತ್ತು ರಿಜಿಸ್ಟರುಗಳು ಮತ್ತು ಅಂಥ ದಾಖಲೆಗಳು, ಛಾಯಾಚಿತ್ರಗಳು ಮತ್ತು ರಿಜಿಸ್ಟರುಗಳನ್ನು ಇಟ್ಟುಕೊಂಡು ಬರಬೇಕಾದಂಥ ರೀತಿ ಮತ್ತು ಅಂಥ ದಾಖಲೆಗಳು, ಛಾಯಾಚಿತ್ರಗಳು ಮತ್ತು ರಿಜಿಸ್ಟರುಗಳು ಒಳಗೊಂಡಿರಬೇಕಾದಂಥ ವಿವರಗಳು;

(ಜಿ) ನೋಂದಣಿ ಪ್ರಮಾಣ ಪತ್ರವನ್ನು ಕೊಡುವುದಕ್ಕಾಗಿ 16ನೇ ಪ್ರಕರಣದ (1)ನೇ ಉಪ ಪ್ರಕರಣದ ಮೇರೆಗೆ ಮಾಡಿಕೊಳ್ಳಬೇಕಾಗಿರುವ ಅರ್ಜಿಯೊಂದಿಗೆ ಇರಬೇಕಾದಂಥ ಪುರಾತನ ವಸ್ತುವಿನ ಛಾಯಾ ಚಿತ್ರಗಳ ಸ್ವರೂಪ ಮತ್ತು ಅವುಗಳ ಪ್ರತಿಗಳ ಸಂಖ್ಯೆ ಮತ್ತು ಅಂಥ ಅರ್ಜಿಯನ್ನು ಮಾಡಿಕೊಳ್ಳಬಹುದಾದಂಥ ನಮೂನೆ ಹಾಗೂ ಅಂಥ ಅರ್ಜಿಯು ಒಳಗೊಳ್ಳಬೇಕಾದಂಥ ವಿವರಗಳು;

(ಎಚ್) 16ನೇ ಪ್ರಕರಣದ (3)ನೇ ಉಪ ಪ್ರಕರಣದ ಮೇರೆಗೆ ಕೊಟ್ಟಿರುವಂಥ ನೋಂದಣಿ ಪ್ರಮಾಣಪತ್ರವು ಒಳಗೊಳ್ಳಬೇಕಾದಂಥ ವಿವರಗಳು;

(ಐ) 21ನೇ ಪ್ರಕರಣದ (1)ನೇ ಉಪ ಪ್ರಕರಣದ ಮೇರೆಗೆ ಅಪೀಲನ್ನು ಹೂಡಬಹುದಾದಂಥ ಪ್ರಾಧಿಕಾರ; ಮತ್ತು

(ಜೆ) ನಿಯಮಿಸಬೇಕಾಗಿರುವ ಅಥವಾ ನಿಯಮಿಸಬಹುದಾದಂಥ ಯಾವುದೇ ಇತರ ವಿಷಯಗಳು

– ಇವುಗಳ ಬಗ್ಗೆ ಉಪಬಂಧಿಸಬಹುದು.

(3) ಈ ಅಧಿನಿಯಮದ ಮೇರೆಗೆ ರಚಿಸಿದ ಪ್ರತಿಯೊಂದು ನಿಯಮವನ್ನು, ಅದನ್ನು ರಚಿಸಿದ ತರುವಾಯ ಆದಷ್ಟು ಬೇಗನೆ, ಸಂಸತ್ತಿನ ಪ್ರತಿಯೊಂದು ಸದನದ ಮುಂದೆ, ಅದು ಅಧಿವೇಶನದಲ್ಲಿರುವಾಗ, ಒಂದು ಅಧಿವೇಶನದಲ್ಲಿ ಅಥವಾ ಒಂದಾದ ಮೇಲೊಂದರಂತೆ ಬರುವ ಎರಡು ಅಧಿವೇಶನಗಳಲ್ಲಿ ಅಡಕವಾಗಬಹುದಾದಂಥ ಒಟ್ಟು ಮೂವತ್ತು ದಿವಸಗಳ ಅವಧಿಯವರೆಗೆ ಇಡತಕ್ಕದ್ದು ಮತ್ತು ಹಿಂದೆ ಹೇಳಿದ ಅಧಿವೇಶನ ಅಥವಾ ಒಂದಾದ ಮೇಲೊಂದರಂತೆ ಬರುವ ಅಧಿವೇಶನಗಳ ನಿಕಟೋತ್ತರದ ಅಧಿವೇಶನವು ಮುಕ್ತಾಯವಾಗುವುದಕ್ಕೆ ಮುಂಚೆ ಆ ನಿಯಮದಲ್ಲಿ ಯಾವುದೇ ಮಾರ್ಪಾಟನ್ನು ಮಾಡಬೇಕೆಂದು ಎರಡೂ ಸದನಗಳು ಒಪ್ಪಿದರೆ ಅಥವಾ ಆ ನಿಯಮವನ್ನು ರಚಿಸಕೂಡದೆಂದು ಎರಡೂ ಸದನಗಳು ಒಪ್ಪಿದರೆ, ಆ ತರುವಾಯ ಆ ನಿಯಮವು ಸಂದರ್ಭಾನುಸಾರ, ಹಾಗೆ ಮಾರ್ಪಾಟಾದ ರೂಪದಲ್ಲಿ ಮಾತ್ರ ಪರಿಣಾಮಕಾರಿಯಾಗಿರತಕ್ಕದ್ದು ಅಥವಾ ಪರಿಣಾಮಕಾರಿಯಾಗಿರತಕ್ಕದ್ದಲ್ಲ; ಆದಾಗ್ಯೂ ಯಾವುದೇ ಅಂಥ ಮಾರ್ಪಾಟು ಅಥವಾ ರದ್ದಿಯಾತಿಯು ಆ ನಿಯಮದ ಮೇರೆಗೆ ಹಿಂದೆ ಮಾಡಿದ ಯಾವುದೇ ಕಾರ್ಯದ ಸಿಂಧುತ್ವಕ್ಕೆ ಬಾಧಕವನ್ನುಂಟು ಮಾಡತಕ್ಕದ್ದಲ್ಲ.

**32. ನಿರಸನ.–** (1) ಪುರಾತನ ವಸ್ತು (ರಫ್ತು ನಿಯಂತ್ರಣ) ಅಧಿನಿಯಮ, 1947 (1947ರ 3) ಇದನ್ನು ಈ ಮೂಲಕ ನಿರಸನಗೊಳಿಸಲಾಗಿದೆ.

(2) ಸಂದೇಹಗಳ ನಿವಾರಣೆಗಾಗಿ, (1)ನೇ ಉಪಪ್ರಕರಣದ ಮೇರೆಗೆ ನಿರಸನಗೊಳಿಸಿದ ಮತ್ತು ಈ ಅಧಿನಿಯಮದ ಪ್ರಾರಂಭಕ್ಕೆ ಮುಂಚೆ ಜಾರಿಯಲ್ಲಿದ್ದ ಆ ಅಧಿನಿಯಮದ 3ನೇ ಪ್ರಕರಣದ ಮೇರೆಗೆ ಕೊಟ್ಟ ಪ್ರತಿಯೊಂದು ಲೈಸೆನ್ಸು, ಅದರಲ್ಲಿ ನಿರ್ದಿಷ್ಟಪಡಿಸಿರುವ ಅವಧಿಯು ಮುಕ್ತಾಯವಾಗಿಲ್ಲದೆ ಇದ್ದಾಗ್ಯೂ, ಜಾರಿಯಲ್ಲಿರುವುದು ನಿಂತುಹೋಗತಕ್ಕದೆಂದು ಈ ಮೂಲಕ ಘೋಷಿಸಲಾಗಿದೆ.

**33. 1958ರ ಅಧಿನಿಯಮ 24ರ ತಿದ್ದುಪಡಿ.–** ಪ್ರಾಚೀನ ಸ್ಮಾರಕ ಮತ್ತು ಪುರಾವಸ್ತು ಸ್ಥಳ ಮತ್ತು ಅವಶೇಷಗಳ ಅಧಿನಿಯಮ, 1958 ಇದರಲ್ಲಿ,–

(i) 1ನೇ ಪ್ರಕರಣದಲ್ಲಿ, (2)ನೇ ಉಪ ಪ್ರಕರಣಕ್ಕೆ ಬದಲಾಗಿ ಈ ಕೆಳಕಂಡ ಉಪಪ್ರಕರಣವನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:–

(2) "ಇದು ಇಡೀ ಭಾರತಕ್ಕೆ ವ್ಯಾಪ್ತವಾಗುತ್ತದೆ".

(ii) 2ನೇ ಪ್ರಕರಣದ ತರುವಾಯ, ಈ ಕೆಳಕಂಡ ಪ್ರಕರಣವನ್ನು ಸೇರಿಸತಕ್ಕದ್ದು, ಎಂದರೆ:–

**“2ಎ ಜಮ್ಮು ಮತ್ತು ಕಾಶ್ಮೀರ ರಾಜ್ಯದಲ್ಲಿ ಜಾರಿಯಲ್ಲಿಲ್ಲದ ಯಾವುದೇ ಕಾನೂನಿಗೆ ಮಾಡಿರುವ ಉಲ್ಲೇಖಗಳನ್ನು ಅರ್ಥೈಸುವುದು.–** ಜಮ್ಮು ಮತ್ತು ಕಾಶ್ಮೀರ ರಾಜ್ಯದಲ್ಲಿ ಜಾರಿಯಲ್ಲಿಲ್ಲದಂಥ ಯಾವುದೇ ಕಾನೂನಿಗೆ ಈ ಅಧಿನಿಯಮದಲ್ಲಿ ಮಾಡಿರುವ ಯಾವುದೇ ಉಲ್ಲೇಖವನ್ನು, ಆ ರಾಜ್ಯಕ್ಕೆ ಸಂಬಂಧಪಟ್ಟಂತೆ, ಆ ರಾಜ್ಯದಲ್ಲಿ ಜಾರಿಯಲ್ಲಿರುವ ಸಂವಾದಿ ಕಾನೂನು ಯಾವುದಾದರೂ ಇದ್ದರೆ, ಅದಕ್ಕೆಮಾಡಿರುವ ಉಲ್ಲೇಖವೆಂದು ಅರ್ಥೈಸತಕ್ಕದ್ದು”.

(i) 23ನೇ ಪ್ರಕರಣದಲ್ಲಿ,–

(ಎ) (2) ಮತ್ತು (4)ನೇ ಉಪ ಪ್ರಕರಣಗಳಲ್ಲಿ “ಕಡ್ಡಾಯ ಖರೀದಿ” ಎಂಬ ಪದಗಳಿಗೆ ಬದಲಾಗಿ “ಕಡ್ಡಾಯ ಆರ್ಜನೆ” ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

(ಬಿ) (3)ನೇ ಉಪ ಪ್ರಕರಣದಲ್ಲಿ, “ಯಾವುವೇ ಅಂಥ ಪುರಾತನ ವಸ್ತುಗಳನ್ನು ಅವುಗಳ ಮಾರುಕಟ್ಟೆ ಮೌಲ್ಯದಲ್ಲಿ ಕಡ್ಡಾಯವಾಗಿ ಖರೀದಿಸುವುದು” ಎಂಬ ಪದಗಳಿಗೆ ಬದಲಾಗಿ, “ಅಂಥ ಯಾವುವೇ ಪುರಾತನ ವಸ್ತುಗಳ ಕಡ್ಡಾಯ ಆರ್ಜನೆ” ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

(iv) 26ನೇ ಪ್ರಕರಣದಲ್ಲಿ,–

(1)ನೇ ಉಪ ಪ್ರಕರಣದಲ್ಲಿ “ಅಂಥ ಪುರಾತನ ವಸ್ತುವನ್ನು ಅದರ ಮಾರುಕಟ್ಟೆ ಮೌಲ್ಯದಲ್ಲಿ ಕಡ್ಡಾಯವಾಗಿ ಖರೀದಿಸುವುದು” ಎಂಬ ಪದಗಳಿಗೆ ಬದಲಾಗಿ “ಅಂಥ ಪುರಾತನ ವಸ್ತುವಿನ ಕಡ್ಡಾಯ ಆರ್ಜನೆ” ಎಂಬ ಪದಗಳನ್ನು ಮತ್ತು “ಖರೀದಿಸಬೇಕಾದುವು” ಎಂಬ ಪದಗಳಿಗೆ ಬದಲಾಗಿ “ಆರ್ಜಿಸಬೇಕಾದುದು” ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

(ಬಿ) (2) ಮತ್ತು (3)ನೇ ಉಪ ಪ್ರಕರಣಗಳಲ್ಲಿ “ಕಡ್ಡಾಯ ಖರೀದಿ” ಎಂಬ ಪದಗಳಿಗೆ ಬದಲಾಗಿ “ಕಡ್ಡಾಯ ಆರ್ಜನೆ” ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು;

(v) 28ನೇ ಪ್ರಕರಣದಲ್ಲಿನ (2)ನೇ ಉಪ ಪ್ರಕರಣಕ್ಕೆ ಬದಲಾಗಿ ಈ ಕೆಳಕಂಡ ಉಪ ಪ್ರಕರಣವನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:–

“(2) ಯಾವ ಪುರಾತನ ವಸ್ತುವಿಗೆ ಸಂಬಂಧಿಸಿದಂತೆ, 23ನೇ ಪ್ರಕರಣದ (3)ನೇ ಉಪಪ್ರಕರಣದ ಮೇರೆಗೆ ಅಥವಾ 26ನೇ ಪ್ರಕರಣದ (1)ನೇ ಉಪ ಪ್ರಕರಣದ ಮೇರೆಗೆ ಕಡ್ಡಾಯ ಆರ್ಜನೆಗಾಗಿ ಆದೇಶವನ್ನು ಮಾಡಲಾಗಿದೆಯೋ ಆ ಪ್ರತಿಯೊಂದು ಪುರಾತನ ವಸ್ತುವಿಗಾಗಿ ನಷ್ಟ ಪರಿಹಾರ ಸಂದಾಯ ಮಾಡತಕ್ಕದ್ದು ಮತ್ತು ಪುರಾತನ ವಸ್ತು ಮತ್ತು ಕಲಾ ನಿಧಿ ಅಧಿನಿಯಮ, 1972ರ 20 ಮತ್ತು 22ನೇ ಪ್ರಕರಣಗಳ ಉಪಬಂಧಗಳು ಸಾಧ್ಯವಾಗಬಹುದಾದ ಮಟ್ಟಿಗೆ, ಆ ಅಧಿನಿಯಮದ 19ನೇ ಪ್ರಕರಣದ ಮೇರೆಗೆ ಕಡ್ಡಾಯವಾಗಿ ಆರ್ಜಿಸಲಾದ ಯಾವುದೇ ಪುರಾತನ ವಸ್ತು ಅಥವಾ ಕಲಾನಿಧಿಗಾಗಿ ಅಂಥ ನಷ್ಟ ಪರಿಹಾರದ ನಿರ್ಧರಣೆ ಮತ್ತು ಸಂದಾಯಕ್ಕೆ ಸಂಬಂಧಪಟ್ಟಂತೆ ಅವುಗಳು ಅನ್ವಯವಾಗುವಂತೆಯೇ ಅಂಥ ನಷ್ಟ ಪರಿಹಾರದ ನಿರ್ಧರಣೆ ಮತ್ತು ಸಂದಾಯಕ್ಕೆ ಸಂಬಂಧಪಟ್ಟಂತೆ ಅನ್ವಯವಾಗತಕ್ಕದ್ದು.

*****